1164

112

~~349~~

శ్రీ ఓ. వా. [illegible]

[illegible]

"ಭಾರತೀಯ ಸಾಹಿತ್ಯ ಮತ್ತು ಸಂಸ್ಕೃತಿಗೆ ~~ಭಾರತೀಯ~~ ಪಾಶ್ಚಾತ್ಯ ವಿದ್ವಾಂಸರ ಸೇವೆ" → 1165

ಹಿನ್ನುಡಿ.

ಈ ಗ್ರಂಥದ ಮೊದಲ ಮುದ್ರಣವು 1969ರಲ್ಲಿ ಪ್ರಕಟವಾಯಿತು. ಆಗ ಈ ಗ್ರಂಥಕರ್ತನ, ಎಂದರೆ ನನ್ನ, ಪ್ರಯತ್ನವನ್ನು ಕೆಲವು ಸ್ವಯಂಮಾಡಂಬರದ ಜನ ಕಡೆಗಣಿಸುತ್ತಿದ್ದರು. ಆದರೆ ಅವರ ಮನೋರೋಗವೇನೆಂದು ಬಲ್ಲೆ. ಅದೊಂದು ಅಂಟುಜಾಡ್ಯ. ಅಂಥ ಬರಹಗಳನ್ನು ಪ್ರಕಟಿಸುವ ಪತ್ರಿಕೆಗಳು ಕೆಲವು ಸಂಪಾದಕರುಗಳಿಗೆ ಮಾತ್ರ ನಾನು ಸಾಕಷ್ಟು ಬರೆದಿದ್ದೇನೆ.

46(38) ವಿಮರ್ಶೆಯೆಂದೆನ್ನುತ್ತ ಏನೇನೋ ತಲೆಹರಟೆ. ಹೀಗೆ ತಲೆಬೇನೆಯಿಂದ ಕೆಲಸದ ನರಳುವವರ ಬಗ್ಗೆ ಹಿಂದೆಯೇ ಕೇಶಿರಾಜ, ರಾಘವಾಂಕ, ಲಕ್ಷ್ಮೀಶ್ವರಂತವರು ಹೇಳಿದ್ದಾರೆ. ಆ ಕಾಲದಲ್ಲಿ ಟೀಕೆಗಳನ್ನೆಲ್ಲ ಕಂಡಾಬಟ್ಟೆ ಮುದ್ರಿಸಲು ಮುದ್ರಣಯಂತ್ರಗಳಿರಲಿಲ್ಲ. ಆದ್ದರಿಂದ ಟೀಕೆಗಳೆಲ್ಲ ಗಾಳಿಯಲ್ಲಿ ತೇಲಿಹೋಗುತ್ತಿತ್ತು. ಈಗ ಹಾಗಲ್ಲ!

ಎಲ್ಲಾ ಭಾಷಾಕ್ಷೇತ್ರಗಳಲ್ಲಿ ಟೀಕೆಯನ್ನು ಮಾಡುವ ಜನಾಂಗವಿದ್ದೇ ಇದೆ. ನನ್ನ ಬೇರೊಂದು ಕೃತಿಯಲ್ಲಿ ತರುಣ ಕವಿ ಜಾನ್ ಕೀಟ್ಸ್ ಇವನ ಅನುಭವವನ್ನು ಕುರಿತಾಗಿ ಹೇಳಿದ್ದೇನೆ.

ನಾನು ಕನ್ನಡ ಸಾಹಿತ್ಯವನ್ನು ವೈಜ್ಞಾನಿಕವಾಗಿ ಅಭ್ಯಸಿಸುವ ಪ್ರಾರಂಭದಲ್ಲಿಯೇ ಈ ಬಗೆಯ ತಲೆಹರಟೆ ವಿಮರ್ಶಕರನ್ನು ಕಂಡಿದ್ದೇನೆ. ಮೈಸೂರಿನ "ಪ್ರಬುದ್ಧ ಕರ್ನಾಟಕ"ಕ್ಕೆ ಇಂತವರ ವಿಮರ್ಶೆಗಳನ್ನು ಪ್ರಕಟಿಸಿ ಹಿಗ್ಗುವುದೇ ಅದರ ಸಾಹಿತ್ಯ ಸೇವೆ! ಅಂತ ಅಪ-ಪ್ರಚಾರ ಬರಹಗಳು ಅಂದಿನ ಸಾಹಿತ್ಯ ಪತ್ರಿಕೆಗಳಲ್ಲಿ ಇಲ್ಲದಿದ್ದರೆ ಅವು ಬರೀ ಸಪ್ಪೆ. ಆ "ಪ್ರಬುದ್ಧ ಕರ್ನಾಟಕ"ವನ್ನು ಅಂದಿನ ಆಂಗ್ಲ ಪ್ರಾಧ್ಯಾಪಕ ವರ್ಗವು "ಹಿಂದು ವಿಶಿಷ್ಟ ಸಾಹಿತ್ಯ ಕೈಪಿಡಿಯಾಗಿ ಸ್ವೀಕರಿಸಿದರಾದರೂ ನಮ್ಮ ಇಂದಿನ ಸಾಹಿತ್ಯ ತಜ್ಞರು ಅದನ್ನೆಲ್ಲ ಅಲ್ಲಗಳೆದು ತಮ್ಮ "ಟೀಕೆ"ವನ್ನೆಲ್ಲ ಅಂದಿನ ನಮ್ಮ ಮುಂದಾಳುದಾರಿಗಳೇ ಮಾಡಿದ್ದುಯೆಂದೆನ್ನುತ್ತ, ಯಾರಾರಿಗೋ - ಆಗಿಂದಾಗ್ಗೆ "ಗದ್ದಲಿ ಪೂಜೆ"ಯನ್ನು ಮಾಡುತ್ತಿರುತ್ತಾರೆ.

ಅದೇನೇ ಇರಲಿ, ಈಗ ನಾನು ಇಲ್ಲಿ ಏನು ಹೇಳುತ್ತಿರುವೆನೋ ಇದನ್ನೆಲ್ಲ ನಮ್ಮ ಹಿರಿಯರು ಅಂದೇ ಹೇಳಬೇಕಿತ್ತು. 1979ರಲ್ಲಿ ನಾನು ಅಲ್ಲಿದ್ದಾಗ ನಮ್ಮ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಬಂಧಿಸಿದ ಹಿರಿಯರನ್ನು ಅವರ ನಿವಾಸದಲ್ಲಿ ಭೇಟಿಯಲ್ಲಿ ಕಂಡೆನು. ನಮ್ಮ ಸಾಹಿತ್ಯದ ಬಗ್ಗೆ ಅವರ ಅಭಿಪ್ರಾಯವೇನೆಂದು ಕೇಳಿದೆನು. ಆಗ ಅವರು ಕನ್ನಡ ಸಾಹಿತ್ಯ ಅದೇನೋ ಸಾಧಾರಣ ಮಟ್ಟದ ಕೃತಿಗಳಿಂದ ಕೂಡಿವೆಯಾದರೂ ನಮ್ಮ ಸಾಹಿತಿಗಳು ತಮ್ಮೊಳಗೆ ನಡೆಸುವ ಅವ್ಯವಹಾರ ತೀರಾ ಅಸಹನೀಯವೆಂಬುದಾಗಿ ಹಲಕೆಲವು ಉದಾಹರಣೆಗಳೊಡನೆ ಹೇಳಿದರು.

1969ರಲ್ಲಿ ಅಚ್ಚಾದ ನನ್ನ ಈ ಪುಸ್ತಕವನ್ನು ಪುನರ್ಮು

ಪ್ರಸ್ತುತ ನನಗೆ ಈ ವರೆಗೆ ಯಾವನೊಬ್ಬ ಸಾಹಿತಿಯೂ ಕೈಗೊಂಡಿಲ್ಲವೆಂದರೆ ನಮ್ಮ ಸಾಹಿತಿಗಳ ಮನೋವ್ಯಾಧಿಯೆಂತಹದೆಂದು ಹೇಳಬಹುದು. ನಮ್ಮ ಹಿರಿಯ ಸಾಹಿತಿಗಳೆಲ್ಲರೂ ಇಂತ ಅನುಭವದಿಂದ ವಿಶೇಷ ಸೊರಗಿದ್ದಾರೆಯೆಂಬುದನ್ನು ನಾನು ಬಲ್ಲೆ.

ಇದಕ್ಕೆಲ್ಲ ಪ್ರಬಲ ಕಾರಣವೆಂದರೆ ನಮ್ಮಲ್ಲಿ ಸ್ವಯಂ: ಸಾಹಿತಿಗಳಾಗಿರಲು ಯೋಗ್ಯರಲ್ಲದ ಜನ ತಾವೂ ಸಾಹಿತಿಗಳೆಂದು ಓಡಾಡುವ ಪರಿಪಾಠ. ಇಂತವರು ಹೆಚ್ಚಾಗಿ ನಮ್ಮ ವಿಶ್ವವಿದ್ಯಾಲಯಗಳಲ್ಲಿ ಇದ್ದಾರೆ, ಕಳೆದ ಶತಮಾನದ ಮತ್ತು ಇತ್ತೀಚಿನ ನಮ್ಮ ಹಲವು ಸಾಹಿತಿಗಳು ವಿಶ್ವವಿದ್ಯಾಲಯಗಳಲ್ಲಿ ಇದ್ದವರಲ್ಲ. ಹಾಗೆ ಇದ್ದ ಪುಟ್ಟಪ್ಪ, ಬೇಂದ್ರೆ, ರಾಜರತ್ನಂ, ಶ್ರೀರಂಗ, ಶಂಕರಭಟ್ಟ, ವೀಸೀ, ತೀನಂಶ್ರೀ, ಗೋಕಾಕ್ ಹೀಗೆ ಕೆಲವರು ತಮ್ಮ ತಾರುಣ್ಯದಲ್ಲಿಯೇ ಸಾಹಿತಿಗಳೆಂದು ಪ್ರಸಿದ್ಧರಾಗಿ ಆ ಮೇಲೆ ಪ್ರಾಧ್ಯಾಪಕರಾದರು. ಈಗ ನಾವು ಕಾಣುವ ಬಹು ಮಂದಿ, ಪ್ರಾಧ್ಯಾಪಕ ಹುದ್ದೆಯನ್ನು ಪಡೆದನಂತರ ತಾವೂ ಸಾಹಿತಿಗಳಾಗಬೇಕೆಂದು ಹೊರಟವರು. ಇಂತವರಿಗೆ ತಾವೆಲ್ಲ ತಜ್ಞರೆಂಬ ಭ್ರಮೆ ಬೇರೆ. ಉದಾಹರಣೆ ಹಿಂದಿದ್ದ ರಾಜಕೀಯ, ಮತ್ತೆ ಶಿಷ್ಯ ವ್ಯಾಪಾರ ಇತ್ಯಾದಿ,

ಇಂತವರು ಹಲವರು ವಿಮರ್ಶಕರೂ ಹೌದು! ಇವರು ಆ ವೃತ್ತಿಗೆ ಇಳಿಯುವುದೇಕೆಂದು ಸ್ವಲ್ಪ ಹೇಳುತ್ತೇನೆ. ರಾ. ನರಸಿಂಹಾಚಾರ್ಯರ "ಕರ್ಣಾಟಕ ಕವಿಚರಿತ್ರೆ" ಈಗ ಪುನರ್ಮುದ್ರಣವಾಗುತ್ತಾ ಇದೆಯಷ್ಟೆ! ಆದರೆ ಆಗ ಮೈಸೂರಿನ "ಪ್ರಬುದ್ಧ ಕರ್ಣಾಟಕ"ಕ್ಕೆ ಆ ಗ್ರಂಥ ಪ್ರಕಟಣೆ ಒಂದು ಹಬ್ಬವೇ ಆಯಿತು. ಅದಾವನೋ ಒಬ್ಬ ಪ್ರಾಧ್ಯಾಪಕ ಅಲ್ಲೆಲ್ಲ ಬರೆದ ಆ ಗ್ರಂಥ ಕರ್ತನಿಗಿಂತ ಏನೂ ಬರೆಯದಿದ್ದ ತಾನೇ ಬಹುದೊಡ್ಡ ತಜ್ಞನೆಂದು ಎಣಿಸಿ ನೂರೆಂಟು ದೋಷಗಳುದ್ದಕ್ಕೂ ಅದನ್ನು ಆ ಸಾಹಿತ್ಯ ಪತ್ರಿಕೆಯಲ್ಲಿ ಟೀಕಿಸಿದನು; ಅದು ಟೀಕೆ ಮಾತ್ರವಲ್ಲ! ದ್ವೇಷ, ಮಾತ್ಸರ್ಯಗಳ ಪರಿಮಳವೂ ಆಗಿತ್ತು. ಇದಿರಲಿ,

ಅರವತ್ತೈದು ವರ್ಷಗಳಿಗೆ ಹಿಂದೆ ಕವಿ ಪುಟ್ಟಪ್ಪನವರು ಅಧುನಿಕ ಕವನಗಳನ್ನು ಬರೆಯುತ್ತಿದ್ದರು. ಆಗ ಅದನ್ನು ಕುರಿತಾಗಿ ಒಂದೇ ಒಂದು ಕವನವನ್ನೂ ಬರೆಯದೇ ಇದ್ದ ಪ್ರಾಧ್ಯಾಪಕನು ತನಗಾದ ಹೊಟ್ಟೆ ಉರಿಯನ್ನೆಲ್ಲ ಆ "ವಿಶೇಷ ಸಾಹಿತ್ಯ ಪತ್ರಿಕೆ ಪ್ರಬುದ್ಧ ಕರ್ಣಾಟಕ"ದಲ್ಲಿ ಕಾರಿದನು, ತನಗೆ ಹಾಗೆ ಬರೆಯುವ ಸಾಮರ್ಥ್ಯವಿಲ್ಲವಲ್ಲ ಎಂಬ ಉದ್ಗಾರದ ಬೊಗಳಿಕೆ ಇದು ಎಂಬುದಾಗಿ ಜನ ಹೇಳುತ್ತಿದ್ದರು,

ಸಾಹಿತಿಗಳೂ ಮನುಷ್ಯರಷ್ಟೆ! ಬರೆಯುವುದೆಲ್ಲ ನಮ್ಮ ಪುಢಾರಿಗೂ, ತಿರುಕರಿಗೂ, ಮತ್ಸರೀ ಪ್ರಾಧ್ಯಾಪಕರಿಗೂ ಸರಿಯಾಗಬೇಕೆಂದರೆ ಹೇಗೆ? ಇಂದಿನ "ಪ್ರಬುದ್ಧ ಕರ್ಣಾಟಕ, ಜಯಕರ್ಣಾಟಕ, ವಿಶ್ವಕರ್ಣಾಟಕ" ಎಂಬೀ "ಕರ್ಣಾಟಕ"ಗಳಿಗೆ ದ್ವೇಷಕಾರಕ ವಿಮರ್ಶೆಗಳನ್ನು ಪ್ರಕಟಿಸುವುದೇ ಉತ್ಸಾಹದ ಕೆಲಸವಾಗಿತ್ತು. ಇಂದೀಗ ಜ್ಞಾನಪೀಠ ಪ್ರಶಸ್ತಿ ಗಳಿಸಿದ

ಮತ್ತು ಗತಿಸುತ್ತಿರತಕ್ಕವರನ್ನೆಲ್ಲ ಅಲ್ಲಲ್ಲಿ ಇರುವ ನಮ್ಮ ಪ್ರಾಧ್ಯಾಪಕರ ಪ ಗಳಿಂದ ಕಾಲದಿಂದ ಕಾಲಕ್ಕೆ ಖಂಡಿಸುತ್ತ ಬಂದಿದೆ. ಬಹಳ ಹಿಂದೆ ಶ್ರೀಪ ರಾಮರ ಕಾರಂತರ "ಬಾಲ ಪ್ರಪಂಚ" ಪ್ರಕಟವಾದಾಗ ನಮ್ಮ ಅಲ್ಪಸ್ವಲ್ಪ ತಿಳಿದ ಪ್ರಾಧ್ಯಾಪಕರು ತುಂಬಾ ನೊಂದುಕೊಂಡರು. ಕಟುವಿಮರ್ಶೆಯಂತೂ ಹಲವು; ಕೆಲವರಿಗೆ ನಿದ್ದೆಯೂ ಇಲ್ಲ.

ಇನ್ನೇಕೆ ಹೇಳಬೇಕು? ಹೊಸತು, ನನಗೆ ಸಾಕಷ್ಟು ತಿಳಿದಿದೆ. ಮಾಸ್ತಿಯವರ "ಚಿನ್ನದ ನಾಯಕ" ಪ್ರಕಟವಾದಾಗ, ಮತ್ತೆ ಗೋವಿಂದ ಪೈ, ಬೇಂದ್ರೆ, ಗೋಕಾಕ್, ಹೀಗೆ ಹಲವರ ವಿಶಿಷ್ಟ ಕೃತಿಗಳನ್ನು ಕಂಡು ಅಳುತ್ತಿದ್ದವರೆಲ್ಲ ಯಾರೆಂದು ಗೊತ್ತೆ? ಹಳೆಯ ಪತ್ರಿಕೆಗಳನ್ನು ನೋಡಬೇಕು. ಹಾಗೆ ವಿಮರ್ಶೆ ಬರೆದು ಹಿಗ್ಗುತ್ತಿದ್ದ ಹಲವರು ಪ್ರಾಧ್ಯಾಪಕರು. ಅವರಂತ ಪ್ರಾಧ್ಯಾಪಕರಿಂದು ಮಾತ್ರ ಕೇಳಬೇಕು. ಆ ವಿಚಾರ, ಪ್ರಸ್ತುತ, ಮುಂದಕ್ಕೆ ನೋಡುವ.

ಇದೊಂದು ಹೊಟ್ಟೆಕಿಚ್ಚಿನ ರೀತಿ. ಈ ರೋಗವನ್ನು ನಮ್ಮ ಪ್ರಾಧ್ಯಾಪಕರಿಗೆ ನಿವಾರಿಸಿಕೊಳ್ಳಲು ಆಗದಿದ್ದರೆ ಅವರು ವಿಮರ್ಶೆ ಬರೆಯುತ್ತಾರೆ. ಆವಾಗ ಅವರ ಮಿತ್ರಕೂಟಗಳಿಗೆಲ್ಲ ಸಂತಸವಂತೆ, ಬಹುದೊಡ್ಡ ಲೇಖಕರು ಬರೆಯುವ ನನ್ನಂತವನ ಬರಹಗಳಾದರಂತು ಸರಿ, ಇವರೆಲ್ಲರ ಟೀಕೆಗಳು ವ್ಯಂಗ್ಯದಿಂದ ಬಹಳ ಖಾರವಾಗಿ ಕೇಳಿಸುತ್ತದೆ. ಹೊಸದಾಗಿ ಏನಾದರೊಂದು ರಚಿತವಾದಾಗ, ಅದು ಕಾವ್ಯವೇ ಆಗಲಿ, ಕಾದಂಬರಿಯೇ ಆಗಲಿ, ಹಾಗೊಂದು ಗುಲ್ಲು ಇದ್ದೇ ಇದೆ. ಕಳೆದ ಶತಮಾನದಲ್ಲಿ ಆಂಗ್ಲ ಸರಕಾರ ದೇಶದಲ್ಲಿ ಮೊದಲ ಬಾರಿಗೆ ರಸ್ತೆಗಳು, ಸೇತುವೆಗಳು, ರೈಲುರಸ್ತೆಗಳು, ಇತ್ಯಾದಿ ಕಟ್ಟುತ್ತಿದ್ದಾಗ ಅವನ್ನೆಲ್ಲ ಕೆಡಹುವ Vandals ಅಲ್ಲಲ್ಲಿ ಇದ್ದೇ ಇದ್ದರು. ಅದೇ ರೀತಿ ಸಾಹಿತ್ಯ ಕ್ಷೇತ್ರದಲ್ಲಿ ಕೆಲವರು ಪ್ರಾಚಾರ್ಯರು, ಪ್ರಾಧ್ಯಾಪಕರು, ಏನೇನೋ ಜನ!

ಹಾಗೆ ವಿಮರ್ಶೆ ಬರೆಯುವ, ಹೊಸದಾಗಿ ಕಟ್ಟಿದ, ಕಟ್ಟುತ್ತಿದ್ದ ಸಾಹಿತ್ಯ ಯೋಜನೆಗಳ ಹಾಳುಗೆಡಹಲು ಪ್ರಯತ್ನಿಸುತ್ತಿದ್ದ ನಮ್ಮ Vandals, ಇವರ ಬಗ್ಗೆ ನಮ್ಮ ಹಿಂದಿನ ಮತ್ತು ಎಲ್ಲಾ ಕಾಲದ ಹಿರಿಯ ಸಾಹಿತಿಗಳೇ ತಕ್ಕ ಕ್ರಮವನ್ನು ತೆಗೆದುಕೊಳ್ಳಲಿಲ್ಲವೋ ತಿಳಿಯದು. ಆಗ ಅವರೆಲ್ಲ ಮೌನವಿದ್ದರು. ಅವರೆಲ್ಲ ತಮಗೆ ಬರೆದ ಕಟು ವಿಮರ್ಶೆಗಳಿಂದ ನೊಂದುಕೊಂಡರೆಂಬುದು ನಿಜ. ಅವರ ಆ ಕಟು ಅನುಭವವನ್ನು ಹತ್ತು ಲಕ್ಷರೂಪಾಯಿಗಳ ಬಹುಮಾನ ಸಂಭಾವನೆಗಳೂ ಅಳಿಸವು.

"ಅನುಭವವು ಸವಿಯಲ್ಲ, ಅದರ ನೆನಪೇ ಸವಿಯು," ಎಂದೆನ್ನುವ ಮಾತು ಸಾಹಿತಿಗೆ ಅನ್ವಯಿಸುವುದಿಲ್ಲ; ಏಕೆಂದರೆ ಸಾಹಿತಿಗಳ ಅನುಭವದ ನೆನಪನ್ನು ಕಹಿಯಾಗಿಸುವುದು ನಮ್ಮ ಬೀದಿಗಳಲ್ಲಿ ಅಲೆಯುತ್ತಿರುವ ಪ್ರಾಧ್ಯಾಪಕ ವಿಮರ್ಶಕರು.

ಅಷ್ಟೇ ಅಲ್ಲ, ಒಬ್ಬನಿಗೆ ದ್ರೋಹ ಬಗೆಯಬೇಕೆಂದು ನಿರ್ಧರಿಸಿದವನಿಗೆ ನಾಚಿಕೆಯೂ ಇರಬೇಕಿಲ್ಲ. ತನ್ನ ಸ್ವಜನವನ್ನೇ, ಸೋದರರನ್ನೇ ಮೋಸಗೊಳಿಸುವವರು ಅದೆಷ್ಟೋ! ಒಳಗೆ ಮೋಸ, ಹೊರಗೆ ವೇಷವೆಂಬಂತೆ ಜನ ಸೋದರ ಸಾಹಿತಿಗಳನ್ನು ಖಂಡಿಸಿ ತಮ್ಮ ಹಿರಿಮೆಯನ್ನು ತೋರಿಸಿಕೊಂಡಾಗ ಅವರಿಗೆ ನಾಚಿಕೆಯೂ ಇಲ್ಲ, ನಿಷ್ಠೆಯೂ ಇಲ್ಲವೆಂಬಂತೆ ಅವರ ರೀತಿ ಮತ್ತು ನೀತಿ!

ನಮ್ಮ ನಾಡಿನ ಸಾಹಿತಿ ಪ್ರಾಧ್ಯಾಪಕರು ಬಹು ಹಿಂದಿನ ನಮ್ಮ ಶಾಂತಕವಿ, ನಂದಳಿಕೆ ಈ ಮೊದಲಾದವರಂಥ, ವಿಶ್ವವಿದ್ಯಾಲಯಗಳನ್ನು ಕಾಣದ ಹಲವು ಜನರ ಬರಹಗಳನ್ನು ಖಂಡಿಸುತ್ತ ಈಗ ಇಲ್ಲದೇ ಹೋದರು. ಹಾಗಿದ್ದರೂ ಇಂತ ಜನಕ್ಕಾಗಿ ಹೆದರಿ ಆ "ರಾಮಾಶ್ವಮೇಧ"ದ ಕರ್ತೃ ಲಕ್ಷ್ಮೀನಾರಣಪ್ಪನು ಸಹ ತನ್ನ ಹೆಸರನ್ನೇ ಪ್ರಕಟಿಸುತ್ತಿದ್ದಿಲ್ಲವಂತೆ. ಅದು ಸಹ ನಿಜ! ಈಗಲೂ ಕೆಲವರು ಹಾಗೆ ಮಾಡುತ್ತಾರೆ. ಇದಕ್ಕೆಲ್ಲ ಕಾರಣ ನಮ್ಮ ಪ್ರಾಧ್ಯಾಪಕರು, ಏನೋ ದೊಡ್ಡ ಕಟ್ಟಡಗಳಲ್ಲಿರುತ, ತಾವು ಬರೆದುದೆಲ್ಲ ಸಾಹಿತ್ಯ ಎಂಬ ಭ್ರಮೆ; ಅವರೊಡನೆ ಗ್ರಂಥ ಪ್ರಕಾಶಕರು, ಕೆಲವು ಪತ್ರಿಕೆಗಳು, ಎಂದು ಅವರ ವ್ಯಾಪಾರ, ಹಾಗೂ ವ್ಯವಹಾರ!

ಹೀಗೆ ಪ್ರಾಧ್ಯಾಪಕರೆಂದೆನ್ನುವ ಜನಕ್ಕೆ ಕೆಲಸ ಕಡಿಮೆ. ಒಂದು ಹರಟೆಗೆ ತುಂಬಾ ಸಮಯವಿದೆ, ಬೇರೇನೂ ಕ್ಷೇತ್ರದಲ್ಲಿ ಕ್ರಿಯಾಶೀಲರಾಗದಿದ್ದಾಗ ಅವರು ಸಾಹಿತಿಗಳೆಂದೆನಿಸಿಕೊಳ್ಳಲು ಹೊರಟರು. ಅವರ ಭಾಷಾಜ್ಞಾನ, ಭಾಷಾ ಅಭಿಮಾನಗಳ ಪರಿಮಿತಿಯೂ ಅಷ್ಟಕ್ಕಷ್ಟೆ! ಇಂತ ಜನಕ್ಕೆ ತಲೆತುಂಬಾ ಅಹಂಕಾರ; ಸ್ವಯಂಕೃತಿಯ ಸರಕಾರದಿಂದ ಯಾವಾವುದೋ ರೀತಿಯಲ್ಲಿ ಹಿಂದಕ್ಕೆ 'ಗ್ರಂಥ'ದ ಗಂಟು ಸಿಕ್ಕಿದಾಗ ಇವರೆಲ್ಲ ತಜ್ಞರೂ ಆದರು. ದೊಡ್ಡ ಸಭೆಗಳಲ್ಲಿ ವಿದ್ವಾಂಸರು ಮಾತಾಡುವಾಗ ನಮ್ಮ ಸ್ವಾಯ ಮಾತಂ ಬರದ 'ಗ್ರಂಥ' ತಜ್ಞರು ಸಭೆಯ ಹಿಂದೆ ಮುದುಡಿ ಇರುತ್ತ ತಮ್ಮ ಸಪ್ಪೆ ಮೊಗವನ್ನು ಜೋಲಿಸಿ ಕಿಟಕಿಯ ಹೊರಗಿನ ಪ್ರಪಂಚವನ್ನು ನೋಡುತ್ತಾ ಕಾಲ್ಕಳೆಯುತ್ತಾರೆ,

ಇಂದು ತಜ್ಞರಲ್ಲಿ ಒಂದೊಂದು ಕುಲವಿದೆಯಂತೆ. ಏನೋ ಒಬ್ಬನನ್ನು ಯಾವುದೋ ಆಸನದಲ್ಲಿ ಬಳಸಿಕೊಳ್ಳುವವರ ಕುಲವು ಅದು. ಅವರ ಕುಲಗಳ ಪತಿಗಳೂ ಇದ್ದು. ಹಾಗಾದಾಗ ನಮ್ಮಲ್ಲಿ ಕುಲಪತಿಗಳು, ಸೇನಾಪತಿಗಳು, ಗಜಪತಿಗಳು, ಸಿತಪತಿಗಳು ಎಂದೆಲ್ಲ ಇರುತ್ತಾರೆ. ಅವರೆಲ್ಲ ಒಟ್ಟುಗೂಡಿದಾಗ ತಜ್ಞರೆ! ನನ್ನ ಕೃತಿಗಳ ಮೇಲೆ ವಿಮರ್ಶೆ ಬರೆದವರೆಲ್ಲ ಪ್ರಾಧ್ಯಾಪಕರಂತೆ. ಅವರನ್ನೆಲ್ಲ ನಾನು ಬಲ್ಲೆ! ನೋಡುವ ಪುಣ್ಯ ಒದಗಲಿಲ್ಲ. ಸಾಹಿತ್ಯಕ್ಕೆ ಅಂತ ಒಂದು ಪ್ರಶಸ್ತಿ ಅವಶ್ಯಕತೆಯೂ ಇಲ್ಲ. ಆದರೆ ಒಂದು ಸರಿ! ಅದೇನಾದರೊಂದು ಹೊಸತರ ಸೃಷ್ಟಿಯಾದರೆ ಅದರ ಬಗ್ಗೆ ಹರಟೆಹೊಡೆದು ಅದನ್ನೆಲ್ಲ ಹೋಲಿಸಿ ಜನ

ಇದ್ದೇ ಇದ್ದಾರೆ.

"When there is something new, there's always some spoiler out there to create trouble."

ಅಂತವರು ಕೇಡನ್ನು ಬಗೆಯುವುದು ಮಾತ್ರವಲ್ಲ, ತಾವು ಆ ಕೃತಿಗಳನ್ನು ರಚಿಸುವವರಿಗಿಂತ ಮೇಲು ಎಂಬುದು ತೋರ್ಪಡಿಸಿಕೊಳ್ಳುವ ಒಂದು ದುರ್ಬಲವಾದ ಪ್ರಯತ್ನ. ಅವರ ಅಂತ ಹರಟೆಗೆ ನಾನೊಂದು "ಪತ್ರ", ಏಕೆಂದರೆ ನಾನು ಅಮೇರಿಕಾದಿಂದ ಅಥವಾ ಇತರ ದೇಶಗಳಿಂದ ಬರೆದಾಗ "ಅವನಿಗೆ ಹೆಚ್ಚಾಯಿದೆ; ಅವರಿಂದ ಇಂತಹ ಪ್ರಶಂಸೆಗಳು," ಎಂಬ ಹೊಟ್ಟೆ ಉರಿಯ ಉದ್ಗಾರ ಬೇರೆ. ನನ್ನ ಗ್ರಂಥವನ್ನು ಟೀಕಿಸಿದ ಒಬ್ಬ ಪ್ರಾಧ್ಯಾಪಕ ನಾನಿದ್ದ ಕಡೆಗೆ ಸಂಚಾರಿಯಾಗಿ ಬಂದ. ಆಗ ನಾನೇ ಅವನನ್ನು ಬಹು ದೂರಕ್ಕೆ ಫೋನ್ ಮಾಡಿ ಬನ್ನಿಯೆಂದು ಆಹ್ವಾನಿಸಿದೆ; ಅವನೂ ಒಬ್ಬ ಪತಿ; ಅವನು ಕುಲಪತಿಯಲ್ಲ, ತನ್ನ ಸತಿಯ ಪತಿ ಮಾತ್ರ! ಹೇಗೂ ಇಬ್ಬರೂ ಬಂದರು. ಅವನಾರೆಂದು ಮಾತ್ರ ನೋಡಿಕೊಂಡೆ. ಸಾಹಿತ್ಯ ವಿಚಾರವೇನೂ ನಾವು ಮಾತಾಡಲಿಲ್ಲ; ಬರೇ ಹವಾಮಾನ ವಿಷಯ, ಇತ್ಯಾದಿ - ಅಷ್ಟೆ!

ನಮ್ಮ ಪ್ರಾಧ್ಯಾಪಕರೆಂದೆನಿಸುವ ಅರ್ಧ-ಪಂಡಿತ ಸಾಹಿತಿಗಳ ಬಗ್ಗೆ ನಮ್ಮ ಜನ ಯಾವ ಅಭಿಪ್ರಾಯವಿಟ್ಟಿದ್ದಾರೋ ನಾನು ತಿಳಿಯೆನು. ಆದರೆ ನನ್ನೊಬ್ಬ ಮಿತ್ರನು ಸ್ವಾಮಿ ವಿವೇಕಾನಂದರು ಹೀಗೆ ಇಂತೆಂದರೆಂದು ನನಗೆ ಹೇಳಿದನು. ಅದೇನೆಂದರೆ:—

"ಒಂದು ದಿನಕ್ಕೆ ಕೇವಲ ಒಂದು ತಾಸು ಕಾಲ ಮಾತ್ರ ಕೆಲಸ ಮಾಡುತ್ತ ತಾನೊಬ್ಬ ವಿದ್ಯಾವಿಯೆಂದು ಭಾವಿಸಿ ಹರಟೆ ಹೊಡೆಯುತ್ತ ಕಾಲವನ್ನು ತಳ್ಳುವ ಒಬ್ಬ ಪ್ರಾಧ್ಯಾಪಕನಿಗಿಂತ ದಿನವಿಡೀ ಎಕ್ಕಡವನ್ನು ಹೊಲಿಯುತ್ತ ನಿಷ್ಠೆಯ ಸೇವೆಯನ್ನೆಸಗುವ ವ್ಯಕ್ತಿಯೇ ಮೇಲು." ಹೀಗೆಂದುದಲ್ಲದೆ ಇತ್ತೀಚಿನ ಒಂದು ಕವನವು ಈ ರೀತಿ ಉದ್ಗರಿಸಿದೆ.—

"ನಾಟಕದ ನಟವರನ ವಿಟಚೇಷ್ಟೆಯಂತೆ
ಬರೆವಣಿಗೆ ಬರೆಯುವುದು ಬರಿಗೊಡ್ಡ ಹರಟೆ;
ಉದರವನು ತುಂಬಲಿಕೊ ಹೊಗಳಿಕೆಗೊ ತೆರನೆ
ಎಕ್ಕಡವ ಹೊಲಿಯುವಾ ಚಪ್ಪಲಿಗನರತೆ
ಲೇಖನಿಯು ಗೀರುತಿಹ ಸಾ ಬೋಗಸೆ - - - -."

ಹಿಂದಿನ ಕಾಲದ ಮತ್ತು ಇತ್ತೀಚಿನ ಹಿರಿಯ ಸಾಹಿತಿಗಳ ಕೃತಿಗಳ ಬಗ್ಗೆ ಬರೆದ ಖಂಡನೀಯ ವಿಮರ್ಶೆಗಳನ್ನು ನೋಡಿ, "ಬೊಗಳುವ ನಾಯಿಗಳು ಬೊಗಳಿಕೊಳ್ಳಲಿ," ಎಂದು ಅವರು ಸುಮ್ಮನಿದ್ದಿರಬಹುದು. ಬಹಿರಂಗವಾಗಿ ಅವರ ಪ್ರತಿಕ್ರಿಯೆ ಎನಿತ್ತೊ ನಾನು ತಿಳಿಯೆನು. ಅದೇನಿದ್ದರೂ "ಕವಿಚರಿತ್ರೆ"ಯನ್ನು ಕುರಿತಾಗಿ ವಿಮರ್ಶೆಯನ್ನು ಪ್ರಕಟಿಸಿ

ಆಗ ಇದರ ಗ್ರಂಥಕರ್ತರು, ಡಾ. ನರಸಿಂಹಾಚಾರ್ಯರು ಹೀಗಂದಿದ್ದರು.—

"ನನ್ನ ಗ್ರಂಥವನ್ನು ಕುರಿತು ಆಕ್ಷೇಪಣೆಗಳು "ಪ್ರಬುದ್ಧ ಕರ್ನಾಟಕ"ದಲ್ಲಿ ಬಂದಿವೆ ---- ಕೆಲವು ಕವಿಗಳ ಕಾಲದ ವಿಚಾರದಲ್ಲಿ ಆಕ್ಷೇಪಣೆಯು ನ್ಯಾಯವಿದ್ದರೂ ಉಳಿದ ಕೆಲವಕ್ಕೆ ಬರಿ ವಿದ್ಯಾಸ್ಪರ್ಧೆ, ದೋಷಾವಿಷ್ಕರಣೇಚ್ಛೆಗಳೇ ಮೂಲವೆಂದು ಹೇಳಬೇಕಾಗಿದೆ.—

"ಗಚ್ಛತಃ ಸ್ಖಲನಂ ಕ್ವಾಪಿ ಭವತ್ಯೇವ ಪ್ರಮಾದತಃ
ಹಸಂತಿ ದುರ್ಜನಾಸ್ತತ್ರ ಸಮಾದಧತಿ ಸಜ್ಜನಾಃ
ದೋಷಾನುತ್ಸೃಜ್ಯ ದೋಷಜ್ಞಾ ಸತ್ಸೃಜ್ಯಂತಿ ಗುಣಾರ್ಥಿನಃ
ಹಂಸಾ ಇವಾಂಬು ಪಯಸೋರ್ಮಿಶ್ರಯೋರ್ನ ದುಗ್ಧಯೋಃ

"ಇದರಿಂದ ತಪ್ಪುಗಳನ್ನು ಉಪೇಕ್ಷಿಸಬೇಕೆಂದಾಗಲೀ ಗಣಿಸಲೇ ಕೂಡದೆಂದಾಗಲೀ ನನ್ನ ಭಾವನೆಯಲ್ಲ. ತಪ್ಪಿಲ್ಲದೆ ಶುದ್ಧವಾಗಿ ಗ್ರಂಥವನ್ನು ಬರೆಯಬೇಕೆಂಬುದೇ ಕೋರಿಕೆ ---- (ಸಿಂಧು ವಿಷಯದ ಮೇಲೆ) ಹೊಸದಾಗಿ ಗ್ರಂಥರಚನೆ ಮಾಡುವುದು ಕಷ್ಟ! ದೋಷದರ್ಶನ ಸುಲಭ ---- ಆಕ್ಷೇಪಿಸುವುದರಲ್ಲಿಯೂ ಒಂದು ಕ್ರಮವೂ ಮರ್ಯಾದೆಯೂ ಉಂಟು. ಪ್ರಮಾದಗಳನ್ನು ಸೌಹಾರ್ದದಿಂದ ತೋರಿಸಿಕೊಡುವವರು ಉಪಕಾರಿಗಳೇ ಸರಿ ---- ಆದರೆ ಕೆಲವರು ಕಾರಣವಿಲ್ಲದೆ ನಿಂದಾಗರ್ಭವಾಗಿಯೂ ಪರಿಹಾಸ್ಯಕರವಾಗಿಯೂ ಬರೆದಿರುವುದು ಶೋಚನೀಯವಾಗಿದೆ ---."

ಇಂಥಾ ಕುನೀತಿ ಹೇಗೂ ನಿಲ್ಲುವಂತೆ ತೋರುವುದಿಲ್ಲ. ಆದುದರಿಂದ ನನಗೆ ಹೊಳೆಯುವುದು ಒಂದೇ ದಾರಿ! ಗ್ರಂಥಗಳನ್ನು ವಿಮರ್ಶೆಗೆಂದು ಕಳುಹಿಸುವ ವ್ಯವಹಾರ ನಿಲ್ಲಬೇಕು, ಕೆಲವರು ತಮ್ಮ ಮಿತ್ರರನ್ನು ಹಿಡಿದು ತಮ್ಮ ಗ್ರಂಥಗಳ ಮೇಲೆ ವಿಮರ್ಶೆ ಬರೆಸಿಕೊಳ್ಳುವ ಆ ವ್ಯವಹಾರವೂ ನಿಲ್ಲಬೇಕು. ಗ್ರಂಥಪ್ರಕಾಶಕರು ತಮ್ಮ ಗ್ರಂಥಗಳ ಹೆಸರನ್ನು ಜಾಹೀರಾತು ಮೂಲಕ ಪ್ರಕಟಿಸಿಕೊಳ್ಳಲಿ; "ನಿಂದಾಗರ್ಭ, ಪರಿಹಾಸ್ಯಕರ" ಲೇಖನಗಳನ್ನು ಬರೆದು ಹಿಗ್ಗುವ ಮತ್ಸರಿಗಳ ಅಭಿಪ್ರಾಯ ಜನಕ್ಕೆ ಬೇಕಿಲ್ಲ. ಗ್ರಂಥಗಳ ಓದುಗರೇ ನ್ಯಾಯವಾದ ವಿಮರ್ಶಕರಲ್ಲದೆ ಅಲ್ಲೊಬ್ಬ ಇಲ್ಲೊಬ್ಬ ಹುಳುಕು ತಜ್ಞರ ಹೊಲಸು ಬರೆಹವಲ್ಲ. ನಿಷ್ಪಕ್ಷಪಾತ ವಿಮರ್ಶೆಯನ್ನು ಕೊಡಲಾಗದವರು ನಿಜಕ್ಕೂ ಮನೋರೋಗಿಗಳು. ಈ ವಿಷಯದಲ್ಲಿ ನಮ್ಮ ಎಲ್ಲಾ ಸಾಹಿತ್ಯ ಸಂಸ್ಥೆಗಳೂ ಪತ್ರಿಕಾ ಸಂಪಾದಕರೂ ತೀವ್ರ ಆಲೋಚಿಸಬೇಕೆಂದಷ್ಟೇ ಇಲ್ಲಿ ಹೇಳುವೆನು.

ಡಾ. ನರಸಿಂಹಾಚಾರ್ಯರು ಹೇಳಿದಂತೆ 'ತಪ್ಪುಗಳಿದ್ದರೆ ಹೇಳಬೇಕು.' ಇದನ್ನು ಒಪ್ಪದವರಾರು? ಆದರೆ ಕೆಲವು ಜನ ಮಾಡುವುದೇನು? ವಿದ್ಯಾ ಇಲಾಖೆಯ ಜನ ಅದೇನೋ ಸಮಾಜದಲ್ಲಿ ಹೆಚ್ಚು ಗೌರವವನ್ನು ಪಡೆಯದವರಂತೆ! ಆದುದರಿಂದ ಅವರು

ದೊಡ್ಡ ಶಬ್ದಗಳಿಂದ ಪ್ರಾಧ್ಯಾಪಕರು, ಪ್ರಾಚಾರ್ಯರು, ಪ್ರೊಫೆಸರುಗಳೆಂದೆಲ್ಲ ಹೇಳಿಕೊಳ್ಳುತ್ತಾರೆ. ಇವರಿಗೆ ಸರಕಾರದ ಮತ್ತು ಇತರರ ಅನಾಚಾರಗಳನ್ನು ಕಟುವಾಗಿ ಹೇಳಲು ಧೈರ್ಯವಿಲ್ಲ; ಅಲ್ಲಿ ಬೀದಿಯ ಜನಕ್ಕೆಲ್ಲ ಸಾಷ್ಟಾಂಗ ಬಗ್ಗುವುದು, ಇಲ್ಲಿ 'ವಿಮರ್ಶೆ'ಯೆಂದೆನ್ನುತ್ತ ಔದಾರ್ಯವನ್ನು ಪ್ರಕಟಿಸುವುದು. ಇಂತವರಲ್ಲಿ ಹಲವರು ಮನೋ 'ಇಷ್ಟ'ದವರು, ಕಾವ್ಯನಿಷ್ಠರು, ಸೌಂದರ್ಯನಿಷ್ಠರು, ಇತ್ಯಾದಿ! ಆದರೆ ನಿಜಕ್ಕೂ ಇವರಿಗೆ ಯಾರ ಇಷ್ಟವೂ ಇಲ್ಲ. ಆ ಮಾದರಿಯ ಅನೇಕ ಬರೆಹಗಾರರಿಗೆ ತಮ್ಮನ್ನು ಮಾತ್ರ ತಮಗೆ ಇಷ್ಟ!

ಅಂಥ ಬರೆಹಗಾರರ ಮನೋಭಾವನೆಗೆ ಇನ್ನೊಂದು ಕಾರಣವೂ ಇದೆ. ಇದನ್ನು ನಾನು ಬೇರೆಡೆಯೂ ಹೇಳಿದ್ದೇನೆ. ಆ ಮಾದರಿಯ ವಿಮರ್ಶೆ ಬರೆಯುವವರು ಅದೇನೋ ಹಿರಿಯ ಮುದುಕ ಸಾಹಿತಿಗಳು. ಅವರ ಕೆಲವು ಕೃತಿಗಳು "ಗಟಾರಕ್ಕೆ ಹಾಕಲು ಯೋಗ್ಯ" ಎಂಬುದಾಗಿ ವಿಮರ್ಶಕರು ಹೇಳಿದರು. ಅದರಿಂದ ತಮಗಾದ ಮುಖಭಂಗವನ್ನು ಅವರು ಇತರ ಸಾಹಿತಿಗಳ ಕೃತಿಗಳನ್ನು ಟೀಕಿಸಿ ಸಮಾಧಾನ ತಂದುಕೊಳ್ಳುತ್ತಾರೆ. ಇದಕ್ಕೆಲ್ಲ ಕಾರಣ ಇಲ್ಲದೇ ಇಲ್ಲ.

ಇಂತಹವರ ಬರೆಹ ಜನಸಾಮಾನ್ಯರನ್ನು ತಪ್ಪುದಾರಿಗೆ ಒಯ್ಯುತ್ತವೆ. ಜನರ ನಿಷ್ಪಕ್ಷಪಾತ ಅಭಿಪ್ರಾಯವೇ ಕೃತಿಗಳ ಹಿತಾಹಿತವನ್ನು ಹೇಳುವುದಲ್ಲದೆ ಯಾವಾವುದೋ ಪತ್ರಿಕೆಗಳ ಮೂಲಕ ತನ್ನ ಮನೋಭಾವನೆಯನ್ನು ತೋರಿಸಿಕೊಂಡರೆ ಅದು ಬಹುಸಂಖ್ಯೆ ಓದುಗರ ಅಭಿಪ್ರಾಯವಾಗಬೇಕಿಲ್ಲ. ಯಾರೂ ಆಲೋಚಿಸದೇ ಇದ್ದ ವಿಷಯಗಳ ಮೇಲೆ ಹಿಡಿತವುಳ್ಳವರು ತುಂಬಾ ಪ್ರಯಾಸಪಟ್ಟು ಕೃತಿಗಳನ್ನು ರಚಿಸಿದಾಗ ನಮ್ಮ ನಕಲೀ ತಜ್ಞರಿಗೆ ಆಗುವ ಹೊಟ್ಟೆ ಉರಿಯ ಮಾದರಿಯೆಂತೆಂಬುದಕ್ಕೆ "ಪ್ರಬುದ್ಧ ಕರ್ನಾಟಕ"ದಂತ ಪ್ರಕಟಣೆಗಳಿಂದಲೇ ತಿಳಿಯಬೇಕು. ಆ 'ಸಾಹಿತ್ಯ ಪತ್ರಿಕೆ'ಯಲ್ಲಿ ಇತರರ ಬರೆಹದ ಬಗ್ಗೆ ಚಿಂತನೆಗಳಿಲ್ಲದಿದ್ದರೆ ಅದು ಬರೀ ಸಪ್ಪೆ!

x x x x x

ಸರಿ, ಇದೆಲ್ಲ ಹೇಳುವ ನಾನಾರು? ನಾನೊಬ್ಬ ಸಾಧಕನು ಮಾತ್ರ! ಕೊಡಗಿನ ಕಾಡುಗಳಿಂದ ಹೊರಬಂದ ಕಾಡಾಡಿ! ಕಾಡುಜನವೆಲ್ಲ ನನ್ನಂತೆಯೇ! ನಾನು ಸ್ವಲ್ಪವಾದರೂ ನಮ್ಮ ಪ್ರಾಧ್ಯಾಪಕರಿಂದ ವಿಷಯಗಳನ್ನು ಕಲಿಯಲು ಕಾತರಿಸುವ ಓರ್ವ ಅಜ್ಞನು; ಅವರಂತೆ ಅವರಾಗಿಯೇ ಹೇಳಿಕೊಳ್ಳುವಂತೆ, ತಜ್ಞನೂ ಅಲ್ಲ. ಅಜ್ಞರಲ್ಲಿ ಮೊದಲಿಗ ನಾನೇ! ನನಗೆ ಬುದ್ಧಿಯೂ ಕಡಿಮೆ; ಸಿದ್ಧಿಯೂ ಕಡಿಮೆ!

ಆದರೂ ನಾನೊಬ್ಬ ಸಂಚಾರಿ! ನಾನು ಹೋದಲ್ಲೆಲ್ಲ ನನಗೆ ಕಾಣುವ 'ತಜ್ಞ'ರೆಲ್ಲ ನಮ್ಮ ಪ್ರಾಧ್ಯಾಪಕರಂತವರೆ! ಹಾಗಾಗಿ ನಾನು

ಕಂಗೆಟ್ಟಿದ್ದೇನೆ. ಹಾಗಿದ್ದರೂ ನನ್ನ ಅಲ್ಪ ಬರಹಗಳ ಮೇಲೂ ವಿಷ ಕಾರಿದ ಪ್ರಾಧ್ಯಾಪಕರು ಇದ್ದಾರೆ! ಪರಿಸ್ಥಿತಿ ಇಂತಿದ್ದರೂ ಕೇವಲ ಬಡ ಲೇಖಕನಾದರೂ, ವಿದೇಶಗಳಿಂದ ಬರೆಯುತ್ತಿರುವೆನಾದರೂ ನಾನು ಯಾರ ಸಾಲವನ್ನು ಇಟ್ಟುಕೊಂಡವನಲ್ಲ. ನನಗೆ ಕೊಟ್ಟಿದ್ದನ್ನು ಹಿಂದಕ್ಕೆ ಕೊಡಲೇ ಬೇಕಷ್ಟೆ! ಒಂದೊಂದು ಬಾರಿ ಬಡ್ಡಿಯನ್ನು ಸೇರಿಸಿಯೂ ಕೊಡುತ್ತೇನೆ. ಹಾಗಾಗಿಯೇ ಈ ಬರಹ!

ನಾನೇನೋ ನನ್ನ ಬರಹಗಳಿಗೆ ತುಂಬಾ ಶ್ರಮಿಸಿದ್ದೇನೆ, ಯಾವುದೊಂದು ವಿಷಯ ಬರೆದಾಗಲೂ ಅದಕ್ಕೆ ತಕ್ಕ ಮಾಹಿತಿಯನ್ನು ನಿಷ್ಠೆಯಿಂದ ಸಂಪಾದಿಸಲು ಹೆಣಗಿದ್ದೇನೆ. ಒಂದು ಪೂರ್ಣವಿರಾಮ, ಅಲ್ಪವಿರಾಮವನ್ನು ಸಹ ನಾನು ಬೇರೆಡೆಯಿಂದ ಕದ್ದಾಗ ಅದನ್ನು ಇಂತಲ್ಲಿಂದ ಎಂದು ಸೂಚಿಸುತ್ತೇನೆ. ನನ್ನ ಬರಹಗಳಿಂದಲೇ ಹಸ್ತಪ್ರತಿಗಳಿಂದಲೇ ಕೃತಿಚೋರತನವನ್ನು ಮಾಡಿ ಅನಂತರ ನನ್ನನ್ನೇ ಟೀಕಿಸುವ ದ್ರೋಹವನ್ನು ನಾನು ಇತರರಿಗೆ ಬಗೆಯಲಿಲ್ಲ. ನನ್ನ ಬರಹ ೫೦೦ ಪುಟವಿದ್ದರೆ ಅಷ್ಟೇ ಗಾತ್ರದ ಮತ್ತೇನೋ ಬರಹವನ್ನು ನಿಮಿರಿಸಿ ಇತರರನ್ನು ಟೀಕಿಸುವ ಮತ್ಸರೀ ಪ್ರಾಧ್ಯಾಪಕನೂ ಅಲ್ಲ. ನಾನು ಕಂಡೇ ಇಲ್ಲದ ಸಾಹಿತಿಗಳ ಬಗ್ಗೆ ಮಾತಾಡುವ ಗೋಜಿಗೂ ಹೋಗಲಿಲ್ಲ. ನಾನು ಉಪಯೋಗಿಸದಿದ್ದ ಶಬ್ದಗಳನ್ನು ನಾನು ಉಪಯೋಗಿಸಿದ್ದೇನೆಂಬ ಭ್ರಮೆಯಿಂದ ಮಾತಾಡುವ ಹೀನಾಯವೂ ಇಲ್ಲ. ಹಾಗಾದುದರಿಂದ ಈ ಕೃತಿಯು ಮೊದಲು ಮುದ್ರಣದ ಮೇಲೆ ನನ್ನನ್ನು ತಿಳಿಯದೇ ಇದ್ದ ಕೆಲವು ಅಹಂಕಾರಿಗಳು ಟೀಕಿಸಿದಾಗ ನಾನು ಇಂತ ಬರಹಗಳನ್ನು ಪ್ರಕಟಿಸಿ ತಮ್ಮ ವ್ಯಾಪಾರವನ್ನು ನಡೆಸುವ ಕೆಲವು ಸಂಪಾದಕರುಗಳನ್ನು ಕಂಡೆಯೇ ಕಾಣುತ್ತಿದೆನು. ಅವರು ಸಹ ಮರುತ್ತರಗೊಡುವ ಧೈರ್ಯವನ್ನು ತಂದುಕೊಳ್ಳಲಿಲ್ಲ. ಅವರು ತಲೆ ಮರೆಸಿಕೊಂಡರು. ಆದರೆ ಅಲ್ಲಿರುವ ಜನಕ್ಕೆ ಇವರೆಲ್ಲ ಮಹಾತಜ್ಞರು!

ಆದರೆ ಇವರೆಲ್ಲ ಪೂರಾ ವಿಚಿತ್ರ! ಒಬ್ಬನು ನಾನು ಬರೆದಿದ್ದ ಪುಸ್ತಕದ ಮೇಲೆ ಸಾರಿ ಹೇಳುತ್ತ ಅನಂತರ ನನ್ನನ್ನು ಅಕಸ್ಮಾತ್ತ್ ಕಂಡಾಗ, "ನೀವೇನು ಬರೆದಿದ್ದೀರಿ" ಎಂದೆಲ್ಲ ಮಾತಾಡುತ್ತಾನೆ. ಮತ್ತೊಬ್ಬ 'ತಜ್ಞ' ನನ್ನನ್ನು ಗೊತ್ತೇ ಇಲ್ಲ, ಕಂಡೇ ಇಲ್ಲ, ಎಂದೆಲ್ಲ ಇತರ 'ತಜ್ಞ'ರೊಡನೆ ಹೇಳುತ್ತಾ, ಇದ್ದು ಅನಂತರ ತನ್ನ ತಲೆ ಕೆಟ್ಟು ಮತ್ತೊಬ್ಬನಿಗೆ ನನ್ನನ್ನು ೨೫ ವರ್ಷಗಳಿಂದಲೇ ಚೆನ್ನಾಗಿ ತಿಳಿದಿದೆ ಎಂದೆಲ್ಲ ಹೊಗಳಿ ಬರೆಯುತ್ತಾನೆ.

ನಮ್ಮ ಹಿರಿಯ ಸಾಹಿತಿಗಳು ನಮ್ಮ ಬಗೆಯ ಸಾಧ್ಯ ಪಕ್ಕ ಮೇಲ್ದಾರಿ ಸಾಹಿತಿಗಳ ಬಗ್ಗೆ ಸುಮ್ಮನಿದ್ದಿರಬಹುದು. ಆದರೆ ನನಗೆ ಹಾಗೆ ಸುಮ್ಮನಿರುವ ಪ್ರಮೇಯವಿಲ್ಲ. ಆದರೆ ಅಂಥಾ

ಆಧುನಿಕರ ಬರೆಹಗಾರರ ಟೀಕೆಗಳನ್ನು ಬಿಟ್ಟರೆ ಸಾಹಿತಿಗಳಿಗೆ ಪ್ರೋರಕ್ತದ ಇಂಥ ಪ್ರೋತ್ಸಾಹಕರ ಮಾತುಗಳು ಅವರ ಶ್ರಮವನ್ನು ಸಾರ್ಥಕಗೊಳಿಸುತ್ತವೆ. ಓರ್ವ ವಿದ್ವಾಂಸರು ನನ್ನ ಕೃತಿಯ ಬಗ್ಗೆ ಬರೆಯುತ್ತ:

"It is an invaluable addition to the library of scholarly books in Kannada."

ಹೀಗೆ ಹೇಳಿದಾಗ ನಾನು ಅವರಿಗೆ ಹೀಗೂ ಹೇಳಿದೆನು:

"Read also those wild and outrageous reviews on this same book by the ultra-modern upstarts and pedagogues of the modern Universities who are out on hiding truth and feeding the younger folks with their fake stories and bogus claims."

ಇದು 1970ರ ಕಾಲದಲ್ಲಿ! 1972ರಲ್ಲಿ ನಾನು ಬೆಂಗಳೂರಿನಲ್ಲಿದ್ದಾಗ ಒಂದೆರಡು ಸಾಹಿತ್ಯ ಕೂಟಗಳನ್ನು ಸೇರಿಸಿದ್ದೆನು. ಆಗ ನಾನು ಕೆಲವು ಹಿರಿಯ ಸಾಹಿತಿಗಳೊಡನೆ ಮಾತಾಡುತ್ತಾ, ನನ್ನ ಕೃತಿಯ ಮೇಲೆ 'ವಿಮರ್ಶೆ'ಗಳನ್ನು ಬರೆದ ಜನವನ್ನೆಲ್ಲ ಒಂದು ಕೂಟಕ್ಕೆ ಕರೆಸಿ ಅವರ ಮನೋವ್ಯಾಧಿಯನ್ನೇನು, ಅದೇಕೆ ಅಂಥವರು ಪ್ರತಿಯೊಂದಕ್ಕೂ ಒಂದು ವಿಶಿಷ್ಟ ಕೃತಿಯನ್ನು ಕಂಡಾಗ ಅವರು ತುಂಬಾ ನೊಂದುಕೊಳ್ಳುತ್ತಿದ್ದಾರೆಂದು ತಿಳಿಯುವ ಎಂದು ಹೇಳಿದಾಗ ಅವರು ಹೀಗಂದರು.—

"ಆ ಬಗೆಯ ಮಾತ್ಸರ್ಯತನದಿಂದ ಬರೆದ ನಿಮ್ಮ ಮತ್ತು ನಮ್ಮ ಕೃತಿಗಳಿಗೆ ಮಾತ್ರವಲ್ಲ; ಹಾಗೆ ಉತ್ಸಾಹದಿಂದ ಬಂದಿರುವ ಜನಾಂಗವೆಲ್ಲೆಲ್ಲಿ ಇದೆ. ಅದೇನೋ ಬಗೆಯ ಪತ್ರಿಕೋದ್ಯಮವೋ ಏನೋ! ಅದನ್ನ ನೀಯುತ್ತೆ ಬೇರೆ! ತಮ್ಮ ಮತ್ಸರವನ್ನು ಆ ರೀತಿ ತೋರಿಸಿಕೊಂಡು ಅವರು ಅಂತೇ ಹೋಗುತ್ತಾರೆ. ನೀವು ಸುಮ್ಮನಿರಿ."

ಹೀಗನ್ನುತ್ತಾ ನನ್ನನ್ನು ಸಮಾಧಾನಿಸಿದರು. ಆದರೆ ಅಂಥವರನ್ನು ಅಂತೆಯೇ ಬಿಟ್ಟರೆ ಅದರಲ್ಲೂ ಅಪಾಯವಿದೆ. ತಾವು ಅರಚುವುದೆಲ್ಲ ಸರಿಯೆಂದು ಅಪಪ್ರಚಾರ ಮಾಡುತ್ತಾ ಸಾಗುತ್ತಾರೆ. ಎಳೆ ಜನಾಂಗವನ್ನು ತಪ್ಪುದಾರಿಗೆ ಒಯ್ಯುತ್ತಾರೆ. ತಮಗೂ ಎಲ್ಲ ವಿಷಯ ತಿಳಿದಿದೆಯೆಂಬ ಹಾವಳ್ಯವನ್ನು ತೋರಿಸುತ್ತಾರೆ. ಇಂಥ ಮಾದರಿಯ ವಿಮರ್ಶಕರಿಗೆ ಒಂದು ಸಂಸ್ಥೆಯನ್ನು ನಿರ್ಮಿಸಿ ಅವರಿಗೆ ಸರಕಾರದಿಂದ ಒಂದಷ್ಟು ಗ್ರಾಂಟಿನ ಗಂಟನ್ನು ಒದಗಿಸಿಕೊಟ್ಟರೆ ಸರಕಾರದ ಆ ಕರ್ತವ್ಯ ಜನಕ್ಕೆಲ್ಲ ಇವರೆಲ್ಲ ಒಂದು ಆಶ್ರಾವಸ ತಜ್ಞರ ತಂಡವೆಂದು ತಿಳಿದಂತೆಯೂ ಆಗುವುದು.

ಏನೇ ಇರಲಿ; ನಿಷ್ಠೆಯ ಸಾಹಿತಿಗಳಿಗೆ ಇಂಥವರಿಂದ ತೊಂದರೆ ನಿಜಕ್ಕೂ ಇದೆ. ಅದಕ್ಕೆಲ್ಲ ನಾನು ಹಿಂದೆಯೇ ಉದಾಹರಿಸಿದ ಹೆಸರುಗಳೇ ಸಾಕ್ಷಿ. ಇಂಥಾ ಬಗೆಯ ಪ್ರಾಧ್ಯಾಪಕ-ವಿಮರ್ಶಕರ ತಂಡದ ಹಿಂ

ದೆಯೇ ಹಲವು ಲೋಗ್ಸಿ ಮುದ್ರಕರು ಮತ್ತು ಗ್ರಂಥಪ್ರಕಾಶಕರು. ಒಬ್ಬನು ನಾಲ್ಕೈದು ವರ್ಷಗಳ ಕಾಲ ಈ ಗ್ರಂಥದ ಹಸ್ತಪ್ರತಿಯನ್ನು ಇಟ್ಟುಕೊಂಡು ನಾನು ಅವನ ಬಳಿಗೆ ಹೋದಾಗಲೆಲ್ಲ ನನಗೆ ಕಾಫಿ ಕೊಡಿಸುತ್ತಿದ್ದನು. ಇದು ಅವನ ತಪ್ಪಲ್ಲ. ನಮ್ಮ ತಜ್ಞರ ತಂಡದ ಅಪಪ್ರಚಾರ, ಅಸಹನೀಯತೆ ಮತ್ತು ಅವರದೇ ರೀತಿಯಲ್ಲಿ ಅವರು ನಡೆಸುತ್ತಿರುವ ಅಕ್ರಮ ಕೃತ್ಯಗಳೇ ಪರಿಣಾಮವು! ಅಂಥ ನಕಲಿ ತಜ್ಞರು ಒಂದೊಂದು ಬಗೆಯ 'ಪತ್ರ'ಗಳೆನಿಸಿದರೆ ಬಡ ಗ್ರಂಥಕರ್ತರ ಮತ್ತು ವಿದೇಶಗಳಲ್ಲಿ ವಾಸಿಸುವ ಸಜ್ಜನರ ಗತಿ ಹೇಗೆ.

"ಪತ್ರ/

ಸರಿ, ನಾನೇನೋ ಬರೆಯುತ್ತಿದ್ದೇನೆ. ಯಾವುದೇ ಕೃತಿ ನಿರ್ಮಾಣವೂ ಪರಿಶೋಧನೆಯೂ ಸತ್ಯಶೋಧನೆಯನ್ನು ಆಧರಿಸಿದೆಯೆಂದು ತಿಳಿದೇ ನಾನು ಬಾಲ್ಯದಿಂದಲೇ ಲೇಖನಿಯನ್ನು ಹಿಡಿದಿದ್ದೇನೆ. ಸುಮಾರು ಹದಿನೈದು ಸಾವಿರ ಮೈಲು ದೂರದಿಂದ ಹಸ್ತಪ್ರತಿಯನ್ನು ಇಲ್ಲಿಗೆ ಕಳುಹಿಸಿದಾಗ ಅಲ್ಲಿ ಕಾಣುವ ಒಂದೆರಡು ನ್ಯೂನತೆಗಳು ಸಹ ಮಹಾ ಪ್ರಮಾದವೆಂಬುದಾಗಿ ಬೊಬ್ಬಿಡುವ ನಮ್ಮ ಪ್ರಾಧ್ಯಾಪಕ ತಂಡದ ಖಾಲೀ ಹರಟೆಯನ್ನು ನೋಡಿ ಇದೇಕೆ ಇವರು ಹೀಗೆ ಎಂದು ಆಶ್ಚರ್ಯಪಟ್ಟೆನು. ಅಂತ ಜನಕ್ಕೆ ಒಬ್ಬ ಸಾಹಿತಿಯ ಬಗ್ಗೆ ಅಪಪ್ರಚಾರ ಮಾಡಲು ಒಂದೆರಡು ಒಣ ಕಲ್ಲುಕಡ್ಡಿಗಳೇ ಸಾಕಷ್ಟೆ!

ನನ್ನ ಈ ಬರಹ ಸಾಹಿತ್ಯ ಚರಿತ್ರೆಯನ್ನು ಕುರಿತಾದರೂ ರಾಜಕೀಯ ಚರಿತ್ರೆಯನ್ನೂ ಸಾಕಷ್ಟು ಬರೆದಿದ್ದೇನೆ. ಅಲ್ಲೂ ನನಗೆ ಯಾವಾವುದೋ ರಾಜಕೀಯ ಬಣ್ಣದ ಪ್ರಾಧ್ಯಾಪಕರನ್ನು ತಿಳಿಯುವ ಅವಕಾಶವಾಯಿತು. ಅಲ್ಲೂ ಕೃತಿಚೋರತನ, ಕೃತಕ ಪರಿಶೋಧನೆ, ತಾವಾಗಿಯೇ ಬರೆಸಿಕೊಂಡ ವಿಮರ್ಶೆಗಳು, ಇತ್ಯಾದಿ! ಆದರೆ ನಮ್ಮ ಜನಸಾಮಾನ್ಯಕ್ಕೆ ಇದೆಲ್ಲ ಹೇಗೆ ತಿಳಿಯಬೇಕು! ನಮಗೆ ಇಂದು ಹೇಳಲಾದ ಚರಿತ್ರೆಯಲ್ಲಿ ಸತ್ಯಾಂಶವು ತೀರಾ ಅಲ್ಪ! ಯಾವಾವುದೋ ದೇಶದ್ರೋಹಿಗಳೆಲ್ಲ ನಮಗೆ ವೀರರು, ಸಂತಗಳು, ಹುತಾತ್ಮಗಳು; ಹಲವು ದಳ್ಳಾಳೀ ಕಾವಿಧಾರಿಗಳೆಲ್ಲ ಮಹಾಸ್ವಾಮಿಗಳು; ಸಮಾಜ ಸುಧಾರಕರು! ಹೀಗಾಗಿ ಇಂದಿನ ನಮ್ಮ ಮಕ್ಕಳು ಬರೇ ಕಾಲ್ಪನಿಕ ವಿಚಾರಗಳನ್ನು ಚರಿತ್ರೆಯೆಂದು ಓದುತ್ತಾರೆ. ನಮ್ಮ ಪ್ರಾಧ್ಯಾಪಕರು ಈ ಬಗೆಯ ಕಾಲ್ಪನಿಕ ವಸ್ತುಗಳನ್ನು ಸೃಷ್ಟಿಸುವುದರಲ್ಲೂ ತಜ್ಞರು.

ನನ್ನೊಂದು ಚರಿತ್ರೆ ಸ್ವತಂತ್ರವಾದ ಸರಕಾರದ ಅಧಿಕೃತ ಭೂಪಟಗಳನ್ನೇ ಅಚ್ಚು ಹಾಕಿಸಿದೆನು. ನೆರೆರಾಜ್ಯದಿಂದ ಗತಿಯಿಲ್ಲದೆ ಕರ್ನಾಟಕಕ್ಕೆ ಓಡಿಬಂದ ಒಬ್ಬ ಪ್ರಾಧ್ಯಾಪಕ ಶ್ರೀಕರ ಒಂದಷ್ಟು ಕಮ್ಯುನಿಸ್ಟನು. ಅವನೂ ಒಬ್ಬ ವಿಮರ್ಶಕನು; ತಲೆಹರಟೆ ವಿಮರ್ಶಕ; ಆ ಭೂಪಟಗಳು ತಪ್ಪು ಎಂದೆನ್ನುವಾಗ ಇವನಿಗೆ ಅದೇನೋ ಒಂದು ತರಹದ ಭೂತದ ಬಾಧೆ ಹಿಡಿದಿರಬಹುದು ಎಂದು ನನ

ಗನ್ನಿಸುತ್ತ. ಅವನನ್ನು ಇದೇ ರೀತಿ ಬರೆದುಕೊಳ್ಳಿದೆನು. ಅವನ ಉತ್ತರವಿಲ್ಲ. ನಾನು ವಿದೇಶಗಳಲ್ಲಿ ಬರೀ ಬೇಳೆಕಾಳು ಬೇಯಿಸುವ ಮಾದರಿಯ ಬರಹಗಳಾದರೂ ನನಗೆ ಇಲ್ಲಿಯ (ಮತ್ತು ಎಲ್ಲೋ ಸಹ) ಪ್ರಾಧ್ಯಾಪಕರ ಆಚಾರ ಅಜ್ಞಾನದ ಕರಾಳ ಸ್ವರೂಪವು ಮೇಲಿಂದ ಮೇಲೆ ಕಾಣುತ್ತಿದೆಯೆಂದು ಹೇಳಲು ವಿಷಾದವಾಗುತ್ತಿದೆ.

ಕಳೆದ ನೂರಿನ್ನೂರು ವರ್ಷಗಳಿಂದ ಆಂಗ್ಲ ಇತಿಹಾಸಕಾರರು ತಮ್ಮ ಕಾಲಕ್ಕೆ ಒಪ್ಪುವ, ತಾವು ಮೊದಲು ಬಾರಿಗೆ ಬಹು ಪ್ರಯತ್ನದಿಂದ ಪರಿಶೋಧನೆಯಿಂದಾಗಿ ಹೇಳಿದ ವಿಚಾರವನ್ನೇ ಈಗಲೂ ನಮ್ಮ ಇತಿಹಾಸ ಪಂಡಿತರು ಹೇಳುತ್ತಾರಲ್ಲದೆ ಹಿಂದೆ ತಪ್ಪಾಗಿ ಹೋದ ವಿಷಯಗಳನ್ನು ಸರಿಪಡಿಸುವ, ನಿಷ್ಠೆಯ ಪರಿಶೋಧನೆಯನ್ನು ನಡೆಸಿ ಸತ್ಯವನ್ನು ಹೇಳುವ, ಸತ್ಯವನ್ನು ಹೊರಗೆಡಹುವ ತೊಂದರೆಯನ್ನು ತೆಗೆದುಕೊಳ್ಳುತ್ತಿಲ್ಲ. ಆದರೆ ಸತ್ಯವನ್ನು ಹೇಳುವಷ್ಟು ಒಂದಿಷ್ಟು ಧೈರ್ಯ ಬೇಕಲ್ಲ! ಅಹಂಭಾವಿಗಳಿಗೆ ಅದೆಲ್ಲಿ ಸಾಧ್ಯ?

ಅಖಿಲ ಭಾರತ ಮಟ್ಟದಲ್ಲಿ ಕೆಲವು ಪ್ರಬಲ ಇತಿಹಾಸಕಾರರು ಹಲವು ಸತ್ಯ ವಿಚಾರಗಳನ್ನು ಇತ್ತೀಚೆಗೆ ಬಯಲಿಗೆಳೆದಿದ್ದಾರೆ. ಆದರೆ ನಮ್ಮ ಚರಿತ್ರೆ ಪಂಡಿತರು ಇಂದಿನ ಜಾತ್ಯತೀತ ಸರಕಾರಕ್ಕೆ ಹೆದರಿಯೋ ಏನೋ ಅದನ್ನೆಲ್ಲ ನಿರ್ಲಕ್ಷಿಸಿ ಹಳೆ ಪುರಾಣವನ್ನೇ ಅದೊಂದು ಗಿಳಿಪಾಠವೆಂಬಂತೆ ಹೇಳುತ್ತಾ ಇದ್ದಾರೆ. ಆ ಮೇಲೆ ತಾವು ನಿರ್ಮಿಸಿಕೊಳ್ಳುವ 'ಸಿಲೆಬಸ್' ತಮ್ಮ ಗಿಳಿಪಾಠದ ವಿಷಯಗಳಲ್ಲದೆ ಬೇರೇನಿಲ್ಲ. ಅದನ್ನು ಸಹ ದೇವರು ಸೃಷ್ಟಿಸಿದನೆಂಬಲ್ಲಿ ವರೆಗೂ ಅವರ ಕಾರುಬಾರು ನೋಡಿ.

ಇಂಥ ಮತ್ಸರ ಜೀವಿಗಳು ಎಲ್ಲೆಲ್ಲೂ ಇದ್ದಾರೆ. ಇವರು ಅಧಿಕಾರಕ್ಕೆ ಮಾತ್ರ ಹೆದರುವವರಲ್ಲದೆ ಮತ್ತಾವುದಕ್ಕೂ ಅಲ್ಲ. ನಮ್ಮ ಐತಿಹಾಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಶೋಧನೆಗಳಲ್ಲಿ ತುಂಬಾ ನ್ಯೂನತೆಗಳಿವೆಯೆಂಬುದು ನಮ್ಮ ಪ್ರಾಧ್ಯಾಪಕರ ಬರಹ ಮತ್ತು ಅವರ ಮತ್ತನೆಗಳಿಂದಲೇ ತಿಳಿಯುತ್ತದೆ. ತಮ್ಮ ಲೇಖನವೇ ಆಗಲಿ, ಪುಸ್ತಕಗಳೇ ಆಗಲಿ, ಅವುಗಳ ಮಾರಾಟಕ್ಕೆ ಇತರರ ಬರಹಗಳನ್ನು ಶೋಷಿಸುವುದು ಅಥವಾ ಖಂಡಿಸುವುದು ಅವರ ನಿತ್ಯದ ವ್ಯವಹಾರವಾಗಿದೆ.

1984 ರಲ್ಲಿ ಭಾರತೀಯ ಪ್ರಮುಖ ವಾರ್ತಾ ಪತ್ರಿಕೆಗಳು ನಮ್ಮ ವಿಶ್ವವಿದ್ಯಾಲಯಗಳಲ್ಲಿರುವ ಬೋಧಕ ವರ್ಗ ಅವರವರೊಳಗೆ ಅತ್ತಿತ್ತ ಬರೆಸುವ, ಬರೆಸಿಕೊಳ್ಳುವ, ಸ್ವತಂತ್ರದ ಸಮೀಕ್ಷೆಗಳು, ಪರಿಶೋಧನಾ ಬರಹಗಳು, ಪರಸ್ಪರ ಕೊಟ್ಟುಕೊಳ್ಳುವ ಅವರ ಪ್ರಶಸ್ತಿ ಪತ್ರಗಳು - ಹೀಗೆ ಹಲವು ವ್ಯವಹಾರ ತೀರಾ ಖಾಲಿ ವಿದ್ಯೆಯಿಂದ ಬೊಬ್ಬಿಟ್ಟಿತು. ನಮ್ಮ ವಿಶ್ವವಿದ್ಯಾಲಯಗಳಿಗೆ ಸರಕಾರವು ವೆಚ್ಚಮಾಡುತ್ತಿರುವ ಕೋಟಿಗಟ್ಟಲೆ ಹಣಕ್ಕೆ ಅದರಿಂದ ದೊರೆಯು

ಪಡೆದು ಎಷ್ಟು? ಗಣಿತ ಮತ್ತು ವಿಜ್ಞಾನ ಕ್ಷೇತ್ರಗಳಲ್ಲಂತೂ ಏನೂ ಹೆಚ್ಚು ನಡೆದಿಲ್ಲ. ನಮ್ಮ ಯುವಕರು ಪಾಶ್ಚಾತ್ಯ ದೇಶಗಳತ್ತ ಹೊರಟರೆ ಅವರ ಪ್ರತಿಭೆಗೆ ಸದವಕಾಶ ಹೇಗೂ ಇದೆ. ಹಾಗೆ ಹೋಗಲಾಗದಿದ್ದವರು ನಮ್ಮ ಸಮಾಜಕ್ಕೆ ಏನೆಷ್ಟು ಸಲ್ಲಿಸುತ್ತಾರೆಂಬುದಕ್ಕೆ University Grants Commission- ಇದರ ಇನ್ನರ್ಥ್ಯ ವರದಿಯಾಗ ಬೇಕೆಂದಷ್ಟೇ ಇಲ್ಲಿ ಹೇಳುವೆನು.

ಜೀವನವೆಲ್ಲ ವಿದ್ಯಾರ್ಜನೆಯಲ್ಲಿ ಕಳೆಯುತ್ತಿರುವವನ ನಗೆ ನಮ್ಮ ಪ್ರಾಧ್ಯಾಪಕ ವರ್ಗದಿಂದ ಏನನ್ನೂ ಕಲಿಯಲಾಗಲಿಲ್ಲ. ಹಾಗಾಗಿ ಇಂದಿಗೂ ನಾನೇ ನನ್ನ ವಿದ್ಯೆಯನ್ನು ಹುಡುಕಿ ಕೊಳ್ಳಬೇಕಾಯಿತು. ಅನೇಕ ವರ್ಷಗಳಿಗೆ ಹಿಂದೆ ಒಬ್ಬ ಗಣಿತ ಪ್ರಾಧ್ಯಾಪಕನನ್ನು "ಪೈಥಾಗರಸ್ ಥೀರಮ್" ಎಂಬುದನ್ನು ಕಂಡುಹಿಡಿದ ಆ ಗಣಿತ ಶಾಸ್ತ್ರಜ್ಞ ಯಾರು? ಎಲ್ಲಿಯವನು? ಅವನ ಕಾಲವಾವುದು?" ಎಂದು ಕೇಳಿದಾಗ ಅವನಿಗೆ ಅದೇನೂ ತಿಳಿದಿರಲಿಲ್ಲ. ಆದರೆ ತನ್ನ ಗಣಿತ ಪಾಠವನ್ನು ಗಿಳಿಪಾಠದಂತೆ ಬೋಧಿಸುತ್ತಿದ್ದನು, ಅಷ್ಟೆ!

ನಮ್ಮ ಸಮಾಜಶಾಸ್ತ್ರ, ಮನಶ್ಶಾಸ್ತ್ರ, ಮಾನವ ಶಾಸ್ತ್ರ ಎಂಬೀ ಬಗೆಯ ಶಾಸ್ತ್ರಗಳು ಬರೀ ತಲೆಹರಟೆಯ, ಹಣವ್ಯಯದ ಪಾಠಗಳು ಎಂಬುದಾಗಿ ಒಬ್ಬ ಪಾಶ್ಚಾತ್ಯ ದಾರ್ಶನಿಕನು ಹೇಳಿದ್ದು ನನಗೆ ಸರಿಯಾಗಿ ಕಂಡಿತು. ಈ ಪಾಠಗಳನ್ನು ಹೇಳುವ ಪ್ರಾಧ್ಯಾಪಕರ ತಂಡಕ್ಕೆ ಅವರು ಇರಿಸಿರುವ ಭವ್ಯ ಕಾಲೇಜು ಕಟ್ಟಡಗಳೇ ಅವರ ದರ್ಶನಕ್ಕೆ ಹಿಂದಕ್ಕಿಟ್ಟು ಎಳೆಯ ಸ್ಥಿತಿಯುಪ್ಪದಲ್ಲದೆ ಬೇರೇನೂ ಇಲ್ಲ. ಅಂದವರು ತಮ್ಮ ಬರಹ ಪೀಳಿಗೆಯನ್ನು ವಿದ್ಯಾರ್ಥಿಗಳನ್ನೂ ಲೇಖನವನ್ನೂ ಬರೆಯುತ್ತ ತಮ್ಮ ಪ್ರತಿಷ್ಠೆಯನ್ನು ತೋರ್ಪಡಿಸಿಕೊಂಡರೆ ತಪ್ಪೇನು? 14-8-1984 ರ Times of India ಪತ್ರಿಕೆಯಲ್ಲಿ ಒಬ್ಬರು ಹೀಗೆ ಹೇಳಿದ್ದಾರೆ:

"In the 1960-s, due to a number of factors, the standard of education began to deteriorate, and many students obtained their degrees by questionable means. When such students managed to join the staff, there was a perceptible change in the quality of teaching and research."

ಇತ್ತೀಚೆಗೆ ಒಬ್ಬ ಪ್ರಸಿದ್ಧ ವಿದ್ವಾಂಸರು ಅದೇ ಪತ್ರಿಕೆಯಲ್ಲಿ ಈ ರೀತಿಯಾಗಿಯೂ ಹೇಳಿದರು.—

"My own guess is, that more than 50 percent of what gets done at the top research level is either

fake or substandard."

ಆದರೆ ಇದನ್ನೆಲ್ಲ ನಡೆಸುತ್ತಿರಲು ಯೋಗ್ಯ ಕ್ರಮ ತೆಗೆದುಕೊಂಡಿರುವರೆಂದು ಹೇಳಿದರೂ ನನ್ನಂಥ "ವಿದ್ಯಾರ್ಥಿ"ಗೆ ಇವರಿಂದ ಈ ಬಗೆಯ ಪ್ರಾಧ್ಯಾಪಕ ವರ್ಗದಿಂದ, ಏನೊಂದು "ವಿದ್ಯೆ"ಯನ್ನು ಪಡೆಯಲಾಗಲಿಲ್ಲವಲ್ಲ, ಎಂಬುದಾಗಿ ಹಲವರು ಹೇಳುತ್ತಿದ್ದುದನ್ನು ಹಲವರು ಕೇಳಿದ್ದಾರೆ. ಹಾಗೆ ಅಲ್ಪ ವಿದ್ಯೆಯ ಪ್ರಾಧ್ಯಾಪಕರಾದುದರಿಂದಲೇ ಅವರ ಮಾತ್ಸರ್ಯಪೂರ್ಣ ವಿಮರ್ಶೆಗಳು, ಅಹಂಭಾವದ ಬರಹಗಳು ಮತ್ತು ದುರಹಂಕಾರದ ವರ್ತನೆಯೆಂಬುದಾಗಿ ನನ್ನ ಮಿತ್ರರೊಬ್ಬರು 1974 ರಲ್ಲಿ ನಾನು ಅಲ್ಲಿದ್ದಾಗ ಹೇಳುತ್ತಾ, ಪರಿಸ್ಥಿತಿಯನ್ನು ವಿವರಿಸಿದರು.

1972 ರಲ್ಲಿ ನಾನು ಬೆಂಗಳೂರಿನ ಮಹಾತ್ಮಾ ಗಾಂಧಿ ರಸ್ತೆಯಲ್ಲಿ ಒಬ್ಬರು ಸಾಹಿತಿ ಮಿತ್ರರನ್ನು ಕಂಡೆನು; ಅವರೊಡನೆ ನಾನೂ ಅಲ್ಲಿಯೇ ಇದ್ದ ಕಾಫೀ ಹೋಟೆಲಿಗೆ ಹೋದೆನು. ಅವರು ತಮ್ಮ ಚೀಲದಿಂದ ನನಗಾಗಿ ಇಟ್ಟುಕೊಂಡಿದ್ದ ಮತ್ತು ನನ್ನ ಕೃತಿಯನ್ನು ಕುರಿತಾಗಿ ಪ್ರಕಟವಾಗಿದ್ದ ಒಂದೆರಡು "ವಿಮರ್ಶೆ"ಗಳನ್ನು ನನಗೆ ಕೊಟ್ಟರು. ನಾನು ಅದನ್ನು ಪೂರ್ತಿ ಓದಿದೆನು. ಅದನ್ನು ಬರೆದವರು ಯಾರಾರು ಎಂದು ನನಗೆ ಗೊತ್ತಿಲ್ಲ; ಅಲ್ಲಿ ಅವರ ಹೆಸರು ಇದ್ದರೂ ಅವರಾರೆಂದು ನನಗೆ ಇಂದೂ ಗೊತ್ತಿಲ್ಲ. ಆದರೆ ಅವರು "ಪ್ರಾಧ್ಯಾಪಕರು" ಎಂಬುದಾಗಿ ನನ್ನ ಮಿತ್ರರು ಹೇಳಿದರು. ನಾನು ಆ ಬರಹ, ಅವರ ವಾದ, ಅವರ ಭಾಷೆ ಇತ್ಯಾದಿಗಳನ್ನು ನೋಡಿ ಬೇಸರಪಟ್ಟೆನು. ಹೀಗೆ ಬರೆಯುವವರು ಪ್ರಾಧ್ಯಾಪಕರಾದರೆ ಇವರಿಗಿಂತ ಸ್ವಲ್ಪ ಉತ್ತಮ ಪ್ರಾಧ್ಯಾಪಕರೇ ನನ್ನ ಜೇಬಿನಲ್ಲಿ ಇದ್ದಾರೆ. ಇವರಿಗೆ ನನ್ನ ಜೇಬಿನಲ್ಲಿ ಜಾಗವಿಲ್ಲವೆಂದು ಹೇಳಿದೆನು.

ಕೆಲವು ಪ್ರಾಧ್ಯಾಪಕ ವಿಮರ್ಶಕರ ಕುಹಕ ಬರಹವನ್ನು ನೋಡಿಯೇ ತಿಳಿಯಬೇಕಲ್ಲದೆ, ಹೇಳಿದರೆ ಸಾಲದು. ಅವರ ಬರಹಕ್ಕೆ ಅವರು ಕೊಡುವ ಆಧಾರವಂತೂ ಬರೀ ಮೋಸ. ತಮ್ಮ ಕುತಂತ್ರದ ಬರಹಕ್ಕೆ ಕೆಲವರು ಅವರಿಗೆ ಅವರವರು ಸಹಾಯಕರಾದರೆಂದು ಹೇಳಿದರೆ ತಾವು ಹೇಳುವುದು ತೀರ್ಮಾನವೆಂದು ಓದುಗರಿಗೆ ಒಪ್ಪಿಸುವ ಒಂದು ಅಲ್ಪ ಪ್ರಯತ್ನ. ಮೋಸಯ್ಯನಿಗೆ ಒಬ್ಬ ದಾಸಯ್ಯ ಎಂಬಂತೆ ಇತರರ ಹೆಸರು ಹೇಳುವುದು; ತನ್ನನ್ನು ತಾನೇ ಸಮಾಧಾನಪಡಿಸಿಕೊಳ್ಳುತ್ತೇನೆಂಬಂತೆ ಇತರರಿಗೆ ತೋರಿಸುವ ಕುಹಕೋಪಾಯ!

ಒಮ್ಮೆ ನಾನು ಒಬ್ಬ ಸೇನಾನಿಯ ವಿಷಯವಾಗಿ ಬರೆದೆನು. ಅವನ ಗತಕಾಲ ಕಥನವನ್ನು ಮಾಡಿದಾಗ ಅದನ್ನು ಓದಿದ ಪ್ರಾಧ್ಯಾಪಕ

ವಿಮರ್ಶಕನೊಬ್ಬನಿಗೆ "ಡಬ್ಬ" ಎಂದನ್ನಿಸಿತು. ನಾನು ಆ ಕೋಸಾನಿ ಯನನ್ನು ಮಹಾವೀರನೆಂದು ಕರೆದಿಲ್ಲವಾದರೂ ಆತನು ತನ್ನ ಬರಹ ದಲ್ಲಿ ನಾನು ಹಾಗಂದಿದ್ದೇನೆಂದು ಸೂಚಿಸಿಯೆ "ಮಹಾವೀರ" ಎಂಬು ದಾಗಿ ಅವರನ್ನು ಚುಚ್ಚುವುದಕ್ಕಾಗಿ ಬರೆದನು.

ನಾನು ಪಾಶ್ಚಾತ್ಯರ ಕೃತಿಯಾವುದೂ ಅದ್ಭುತವಾಗಿದೆಯೆಂ ದು ಹೇಳಲೇ ಇಲ್ಲ. ಆದರೆ ನನ್ನ ಕೃತಿಯನ್ನು ನೋಡಿ ತಲೆ ಕೆಟ್ಟಂತೆ ಆದ ಆ ಪ್ರಾಧ್ಯಾಪಕನು ನಾನು ಹಾಗಂದಿದ್ದೇನೆಂದು ತನ್ನ ಜನಕ್ಕೆ ಹೇಳಲು "ಅದ್ಭುತ"ವೆಂಬುದನ್ನು ಅವರನ್ನು ಚುಚ್ಚುವುದಕ್ಕಾಗಿ ಬರೆದನು. ಇಂಥ ಅನವಶ್ಯ ಬರಹದಲ್ಲಿಯೇ ಅವರ ಸುಖ! ಹೊಟ್ಟೆನೋವಿನ ಬಾಧೆ ಇಂತಹದ್ದರಲ್ಲಿ ಸಮತಗೆ ಕಾಣುತ್ತದೆ. ಮಾರ್ಕ್ ಆಂತೋನಿಯು ಜೂಲಿಯಸ್ ಸೀಸರನ ಕೊಲೆಗಾರರ ನ್ನೆಲ್ಲ ಸನ್ಮಾನ್ಯರೆಂದೇ ಸಂಬೋಧಿಸಿದನು. ನಾನು ಈ ತರಹದ ಬರಹಗಾರರನ್ನು ಪ್ರಾಧ್ಯಾಪಕರೆಂದೇ ಹೇಳಬೇಕಾಗಿದೆ. ಏಕೆಂ ದರೆ ಅವರೆಲ್ಲ ನಿಜಕ್ಕೂ ಪ್ರಾಧ್ಯಾಪಕರೇ! ಇಂತ ಬರಹಕ್ಕೆಲ್ಲ ಕಾರಣ ಇಲ್ಲದೇ ಇಲ್ಲ. "India Today" ಪಾಕ್ಷಿಕದ 1983-84 ನೇ ಸಂಚಿಕೆಯೊಂದರಲ್ಲಿ ಶ್ರೀ. ರವೀಂದ್ರ ನಾಥ್ ಹೀಗಂದಿದ್ದಾರೆ. —

"The fact, as everyone knows, is that a good deal of the research awards (and, also academy awards) have gone to spurious or sub-standard works. What is worse, the academic effluvia has brought a bad ardour even to the genuine scholars."

ಹೀಗೆ ಇನ್ನೊಂದನ್ನು ಹೇಳಬಹುದು. ನಮ್ಮ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣದ ಕ್ರಮವೇ ಬದಲಾಗಬೇಕು. ಈಗ ಅಲ್ಲಿ ಕಾಣಿಸುತ್ತಿರುವ ಆ ಡಂಬರದ ವಿದ್ಯಾಭ್ಯಾಸದ ಮಟ್ಟ ಬಹು ಅಲ್ಪ; ಟೊಳ್ಳುತನದಿಂದಲೂ ಸರಿ. ಇದು ಹೆಚ್ಚಾಗಿ ಇತಿಹಾಸ, ಮನಶ್ಶಾಸ್ತ್ರ, ಮಾನವ ಶಾಸ್ತ್ರ, ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರಗಳಲ್ಲಿ ಕಾಣಿಸುತ್ತದೆ. ನಮ್ಮ ಕೆಲವು ಪ್ರಾಧ್ಯಾಪಕರ ಪುಸ್ತಕ, ಪ್ರಬಂಧಗಳೆಲ್ಲವೂ ಅಲ್ಲಲ್ಲಿ ಇರುವ ಪುಸ್ತಕದ ಪ್ರತಿಗಳ ಕಟ್ಟೆಯಲ್ಲಿ ಇದೆ? ವಿಶ್ವವಿದ್ಯಾಲಯಗಳಲ್ಲಿರುವ ವೈಸ್ ಛಾನ್ಸಲರುಗ ಳಾದವರೇ ಯಾರು? ನಾನು ಹಿಂದೆ ಹೇಳುತ್ತಾ ಬಂದ ಪ್ರಾಧ್ಯಾಪಕ ವರ್ಗದವರೇ! ಅವರು ಆ ಸ್ಥಾನಕ್ಕೆ ಏರುವುದು ಹೇಗೆ? ನಾನು ಹಿಂದೆ ಹೇ ಳಿದಂತೆ ಕುಲಪತಿಗಳ ವಿಷಯವಾಗಿ ಬರೆದು ಕುಲಪತಿಗಳಾಗುವವ ರು ಕೆಲವರಾದರೆ ಕೆಲವರು ರಾಜಕಾರಣಿಗಳ ಹಿಂದೆ ಸುತ್ತಿದಾಗ ಸ್ಥಾನ ಗಳನ್ನು ಪಡೆಯುವವರು. 13-4-1984ರ The Hindustan Times ಪತ್ರಿಕೆಯು ದೊಡ್ಡ ಅಕ್ಷರದಲ್ಲಿ ಹೀಗೆ ಹೇಳಿತ್ತು. —

"Vice-Chancellors, as stooges of the Government."

ಈ ಶಿರೋನಾಮೆಯ ಅಡಿಯಲ್ಲಿ ಅವರು ಯಾವಾವ ಬಗೆಯ ರಾಜಕೀಯವನ್ನಾಡುತ್ತಿದ್ದಾರೆಂದಲ್ಲ ಹೇಳಿತ್ತು. ಬಿಹಾರ್, ಬಂಗಾಳ, ಕೇರಳ ಮತ್ತು ನಮ್ಮ ಕರ್ನಾಟಕದ ವಿಷಯವಾಗಿಯೂ ಅದರಲ್ಲಿ ಹೇಳಿತ್ತು. ಇಂತವರೆ ನಮ್ಮ ಪ್ರಾಧ್ಯಾಪಕರನ್ನ ನಮ್ಮ ಸಂಶೋಧನ ಕಾರ್ಖಾನೆಗಳಲ್ಲಿ ಸಂಶೋಧನೆಗಳನ್ನ ಉತ್ಪಾದಿಸುವಂತೆ ಉತ್ಪಾದಿಸುತ್ತಿರುವುದು. ಇಂಥ ಬಗೆಯ ಪ್ರಾಧ್ಯಾಪಕರು ಅವರ ಮಟ್ಟಕ್ಕೆ ಅನುಗುಣವಾದ ಪುಸ್ತಕಗಳನ್ನ ಸೃಷ್ಟಿಸಿ, ಇತರ ಯೋಗ್ಯ ಪಠ್ಯಪುಸ್ತಕಗಳನ್ನ ತಳ್ಳಿಹಾಕಿ, ಹುಡುಗರಿಗೆ ಅಗ್ಗದಲ್ಲಿ ಮಾರಾಟ ಮಾಡಬಹುದಾದ ತಮ್ಮ ಪುಸ್ತಕಗಳ ಮಟ್ಟಕ್ಕೆ ಅನುಗುಣವಾದ syllabus ಇದನ್ನ ನಿರ್ಮಿಸಿಕೊಂಡಾಗ ನಮ್ಮ ವಿದ್ಯೆಯ ಮಟ್ಟವು ಇನ್ನಷ್ಟು ಕುಸಿಯುತ್ತ. ಇಂತವರು ಬೇರೆಕಡೆಯಿಲ್ಲ ಇರುವಂತೆ ನಮ್ಮ ಪ್ರಬುದ್ಧವಾದ ಕರ್ನಾಟಕದಲ್ಲಿದ್ದಾರೆಂಬುದನ್ನ ಆ ನಮ್ಮ ಪ್ರಬುದ್ಧ ಪ್ರಾಧ್ಯಾಪಕರೇ ತೋರ್ಪಡಿಸಿಕೊಂಡಿದ್ದಾರೆ. ಕೇವಲ ಒಂದಿಷ್ಟು ವಿದ್ಯೆಯನ್ನ ಇವರಿಂದ ಪಡೆಯಲು ಕಾತರಿಸುವ ನನಗೆ ಇದೆಲ್ಲ ಸಾಕಷ್ಟು ತಿಳಿಯುವುದೇ ಮಹಾವಿದ್ಯೆಯಾಗಿದೆ. 14-8-1984ರ Times of India ಪತ್ರಿಕೆಯಲ್ಲಿ ಪ್ರಸಿದ್ಧ ವಿದ್ವಾಂಸರೊಬ್ಬರು ಹೀಗೂ ಹೇಳಿದರು.—

"The syllabuses arrange the topics in the mechanical manner characteristic of sub-standard under-graduate text-books. Teachers engaged in the supervision of research students feel that the whole exercise is a mockery of a test of research ability."

ಹೀಗೆ ಹಾಸ್ಯವಾದ ರೀತಿಯಲ್ಲಿ ಕೆಲವು ಸಮೀಕ್ಷೆಗಳನ್ನ ನಿರ್ಮಿಸಿದುವುಗಳಲ್ಲಿ ಪ್ರಶಸ್ತಿಗೆ ಯೋಗ್ಯ ಇವೆಯೆಂದು ಸಿಫಾರಸ್ಸು ಮಾಡುವ ನಮ್ಮ ಪ್ರಾಧ್ಯಾಪಕರು ಕರ್ನಾಟಕದಲ್ಲೂ ಇದ್ದಾರೆಂಬುದನ್ನ ನಾನು ಕಂಡು ತಿಳಿದಂತಾಗಿದೆ. ಇದರಲ್ಲಿ ಅಷ್ಟಿಷ್ಟು ಸ್ವಾರ್ಥ ರಾಜಕೀಯವೂ ಇದೆ. ಮತ್ತೂ ಏನೇನೋ ಚಪಲತೆ!

ನಾವೆಲ್ಲರೂ ಕಂಡಿರುವಂತೆ ಹೀಗೆ ಪ್ರಾಧ್ಯಾಪಕರಾಗಿದ್ದವರು ಬೇರೆ ಕ್ಷೇತ್ರಗಳಲ್ಲಿ ತಮ್ಮಲ್ಲಿ ಇರಬಹುದಾದ ಜ್ಞಾನಭಂಡಾರ, ಅದೇನಿದ್ದರೂ ಅವರು ಬೇರಾವ ಸಹಾಯಯೋಗ್ಯವಾದವರೋ ಎಂದು ನೋಡದೆ ಅವರನ್ನ ಬೇರಾವ ನೇಮಿಸಿದಾಗ ಅವರಲ್ಲಿ ಬಹುಜನ misfits ಆಗಿ ಕಂಡುಬಂದಿದ್ದಾರೆ. ಕೆಲವೆಡೆ ಅವರನ್ನು ಮಂತ್ರಿಗಳಾಗಿ ನೇಮಿಸಿದ್ದರೂ ಅವರನ್ನ ಆ ಸ್ಥಾನಗಳಿಂದ ಮೆಲ್ಲಗೆ ಹೊರಜಾರಿಸಿದ್ದೂ ಇದೆ. ಒಂದು ರಾಜ್ಯದಲ್ಲಿ ಒಬ್ಬ ಪ್ರಾಧ್ಯಾಪಕನನ್ನ ಒಂದು ಪರೀಕ್ಷಾಸಮಿತಿಯ ಅಧ್ಯಕ್ಷನನ್ನಾಗಿ ನೇಮಿಸಿದರು. ಪರಿಣಾಮವಾಗಿ ಅವನು ಸರಕಾರಕ್ಕೆ

ಸಿಲ್ಲಬಸ ನಿಗದಿಯೊಂದು ತೀರಾ ಅಬದ್ಧವಾಗಿತ್ತು. ಆಗ ಅದಕ್ಕೆ ಸಂಬಂಧಿಸಿದ ಮಂತ್ರಿಯು ಅವನಿಗೆ ಹೀಗೆಂದನು.

"ನೀನು ಇದಕ್ಕೆಲ್ಲ ಯೋಗ್ಯನಲ್ಲ. ನೀನು ನಿನ್ನ ವಿಶ್ವವಿದ್ಯಾಲಯದಲ್ಲಿ ಕಲಿಸುತ್ತಿರು. ನಿನ್ನಂತವನಿಗೆ ಅದು ತಕ್ಕುದಾದ ಜಾಗ!"

ಹೀಗೆನ್ನುತ್ತಾ ಅವನನ್ನು ಅಲ್ಲಿಂದ ತಳ್ಳಿದರು. ಹೀಗಿದೆ ಸ್ಥಿತಿ ಪ್ರಸಂಗ! ಇಂತವರು ಇತರರ ಬರಹವನ್ನು ವಿಮರ್ಶಿಸಿದರೆ ಮತ್ತು ಖಂಡಿಸಿದರೆ ಹೇಗಾದರೂ ತಮ್ಮ ಪ್ರತಿಭೆಯ ಹೆಸರನ್ನು ಉಳಿಸಬಹುದೋ ಎಂಬ ನಿರೀಕ್ಷೆಯಲ್ಲಿರುತ್ತಾರೆ. ಆದರೆ ಇದೆಲ್ಲ ನಮ್ಮ ನಿರ್ಮಾಣದ ದುರದೃಷ್ಟವಷ್ಟೇ ಹೌದು!

ನಮ್ಮ ವಿಶ್ವವಿದ್ಯಾಲಯಗಳ ವಿದ್ಯಾಕ್ರಮ ಮತ್ತು ಮಟ್ಟವು ಯಾವೊಂದು ದೃಷ್ಟಿಯಲ್ಲೂ ತೃಪ್ತಿಯಾಗಿಲ್ಲವೆಂಬುದನ್ನು ನಾವೇಕೋ ದಿನ ನಿತ್ಯ ಕಾಣುತ್ತಲೇ ಇದ್ದೇವೆ. ಭಾರತದಿಂದ ಪಾಶ್ಚಾತ್ಯ ದೇಶಗಳತ್ತ ಹೋದವರು ಇಲ್ಲಿ ಓದಿದ್ದನ್ನೆ ಅಲ್ಲಿ ಪುನಃ ಒಂದಿಷ್ಟು ಓದದೆ ಅವರಿಗೆ ಆಯಾ ಕ್ಷೇತ್ರದಲ್ಲಿ ಹುದ್ದೆಯು ದೊರಕದು. ಪಾಶ್ಚಾತ್ಯ ದೇಶಗಳಲ್ಲಿ ಏಕೆ! ಪಶ್ಚಿಮ ಏಷ್ಯಾದ ಅರಬೀ ರಾಷ್ಟ್ರಗಳಲ್ಲಿ ಸಹ ಇಲ್ಲಿಯ ಪದವೀಧರರೂ ಗಜಪತಿಗಳೂ ದಳಪತಿಗಳೂ ಬೇರಾಗಿಲ್ಲವೆಂದರೆ ಶೋಚನೀಯವಲ್ಲವೇ ನಿರೆ!

"The United Arab Emirates' Government has decided not to recognise degrees in non-scientific specializations given by certain Universities in India, Pakistan and Bangladesh", (The Tribune – 28th Jan. 1986.)

ಹೀಗಾದುದರಿಂದಲೇ ನಮ್ಮ ಯೂನಿವರ್ಸಿಟಿಗಳಲ್ಲಿರುವ "ಪಂಡಿತರು" ತಮ್ಮನ್ನು ತಾವೇ ಪ್ರಶಂಸಿಸುವಂತ ಲೇಖನಗಳನ್ನು ಬರೆದು ತಾವೂ ಸಹ ಸಾಹಿತಿಗಳು ಎಂಬ ಕನಸಿನಿಂದ ಇತರರ ಬರಹಗಳ ಮೇಲೆ ಪ್ರಹಾರ ಮಾಡುವರು. ಪುಸ್ತಕಗಳನ್ನು ಓದದೆ ಮತ್ತು ಸಂಬಂಧಿಸಿದ ವಿಷಯವನ್ನು ತಿಳಿಯದೆ ಕೇವಲ ದ್ವೇಷಪೂರ್ಣ ದುರಹಂಕಾರದಿಂದ ತೋರಿಸಿಕೊಳ್ಳುವುದೇ ಅವರಿಗೆ ಆನಂದ; ಅದೇ ಅವರ ದೇಹಕ್ಕೆ ಸಂಬಳ!

ಪ್ರಾಧ್ಯಾಪಕರು ಬರೆದುದನ್ನು ಇತರ ಮತ್ಸರೀ ಪ್ರಾಧ್ಯಾಪಕರು ಟೀಕಿಸುವಾಗ, ಖಂಡಿಸುವಾಗ, ಅಪಪ್ರಚಾರ ಮಾಡುವಾಗ ಅದು ಬೀದಿಯ ನಾಯಿಗಳು ಕಚ್ಚಾಡಿದಂ

ತೆ ಎಂಬುದಾಗಿ ಬಹಳ ಹಿಂದೆ ಓರ್ವ ವಿಮರ್ಶಕರು ಬರೆದಿದ್ದರು. ಇದರ ಬಗ್ಗೆ ಇತ್ತೀಚೆಗೆ ಬೆಂಗಳೂರಿನ ಓರ್ವ ಪ್ರಾಧ್ಯಾಪಕರೊಬ್ಬರು ಹೀಗೆ ಹೇಳಿದ್ದು ಸುವ್ಯಕ್ತವಾಗಿದೆ:—

"To put it mildly, it is scandalous to have published, a vicious though petty attempt, to malign the reputation of a scholar----What does the reader learn from this kind of stuff? Nothing! I was shocked to find such garbage in the form of reviews." (Hindustan Times, 2-2-'86)

ಹೀಗಿದ್ದರೆ ನಮ್ಮ ವಿಮರ್ಶಕರು ಇಲ್ಲಿರುವ ಪ್ರಭಾವಿತ ವಿದ್ವಾಂಸರ ಬರಹಗಳನ್ನು ಆ ರೀತಿ ತಮ್ಮ "scandalous" ವಿಮರ್ಶೆಗಳ ಮೂಲಕ ಖಂಡಿಸಿ ಪ್ರಚಾರಪಡಿಸಿದರೆ ಇನ್ನು ದೂರದಲ್ಲಿರುವ ನನ್ನಂಥ ಓರ್ವನನ್ನು ಬಿಟ್ಟಾರೆ? ಸರಿ, ಆದರೆ ಹಾಗೆ ಬರೆಯಿಸಿಕೊಂಡ ನಮ್ಮ ಹಲವು ಸಾಹಿತಿಗಳು ಅದರ ಬಗ್ಗೆ ತಕ್ಕ ಕ್ರಮ ಕೈಕೊಳ್ಳದೆ ಮೌನವಾಗಿದ್ದರೆ ಅದು ತಪ್ಪು. ಇಂಥ ವಿಷಯಗಳನ್ನು ನನ್ನಂಥವನು ದೂರದಿಂದ ಕಿರುಚಿಕೊಂಡರೆ ಸಾಲದು; ಇನ್ನೂ ಹಲವರು ಇದರ ಬಗ್ಗೆ ಕಿರುಚಬೇಕು.

ನಾನು ಮೊದಲೇ ಹೇಳಿದಂತೆ ಆ ಮಾದರಿಯ ಬರಹ ಒಂದು ಉಂಟು ಹಾಗೆ! ಅದು ಇನ್ನೂ ಹಬ್ಬದಂತೆ ಮಾತ್ರ, ನಾಡಿನ creative writers and artists ಇವರ ಕೃತಿನಿರ್ಮಾಣಗಳನ್ನು ಕದ್ದು ತಮ್ಮದೆಂಬಂತೆ ಬರೆದು ಪ್ರಚಾರಪಡಿಸದಂತೆ ಬರಹಗಾರರದೇ ಒಂದು ಸಂಸ್ಥೆಯು ಆವಶ್ಯಕವಾಗಿದೆ. ಇದಕ್ಕಾಗಿಯೇ ನಾನು "ಕಾಪಿ ರೈಟ್" ಕಾನೂನನ್ನು ಇನ್ನೂ ಬಲಪಡಿಸಬೇಕೆಂದು ಹೇಳುತ್ತಾ ಬಂದಿದ್ದೇನೆ. ನಮ್ಮ ಸಾಹಿತ್ಯ, ಸಂಗೀತ, ಚಿತ್ರಕಲೆ, ಚಲಚಿತ್ರ, ವಾಸ್ತುಶಿಲ್ಪಾದಿ ಕ್ಷೇತ್ರಗಳಲ್ಲಿ ಅದೆಷ್ಟೋ piracy ನಡೆಯುತ್ತದೆ, ಹಾಗೆ plagiarismನ್ನು ಮಾಡಿ ಮತ್ತೆ ಇತರರ ಸಾಧನೆಗಳನ್ನು ಖಂಡಿಸಿ ತಾವು ಯೋಗ್ಯರೆಂದು ತೋರ್ಪಡಿಸಿಕೊಳ್ಳುವ ಖಂಡಕರು ಅದೆಷ್ಟಿಲ್ಲ?

ಸರಕಾರಗಳನ್ನು ನಡೆಸುವ ಜನಕ್ಕೆ ನಮ್ಮ ಸಾಹಿತಿ ತಜ್ಞರ, ಬರಹಗಾರ, ಪ್ರಾಧ್ಯಾಪಕರ, ಪತ್ರಕರ್ತರ, ವಿದ್ವತ್ತು ಏನೆಂದು ಏನೂ ತಿಳಿಯದು. ಇತರರ ಕೃತಿಗಳ ಮೇಲೆ ತಮ್ಮ ದ್ವೇಷವನ್ನು ಕಾರಿ ಹಾಕುವ sadists ಆವರಲ್ಲಿ ಹಲವು ಜನವೆಂಬುದು ಜನಸಾಮಾನ್ಯಕ್ಕೆ ಹೇಗೆ ತಿಳಿಯಬೇಕು? ನಮ್ಮ

ಪ್ರಾಧ್ಯಾಪಕ ಬರಹಗಾರರ ಮನಸ್ಸೋದ್ಯೋಗಕ್ಕೆ ಇನ್ನೊಂದು ಭವ್ಯವಾದ ಸ್ಪಂದನವನ್ನು ಕೊಡುತ್ತವೆನ್ನು, ಅಲ್ಲವೇ!

ಇದು ಸ್ವಲ್ಪ ಹಿಂದಿನ ಕಾಲದಲ್ಲಿ! ಸುಮಾರು ಅರುವತ್ತು ವರ್ಷಗಳಿಗೂ ಹಿಂದೆ! ಬ್ರಿಟಿಷ್ ರಾಜ್ಯಭಾರ! ಆಗ ಅಲ್ಲಿ ಇರುತ್ತಿದ್ದ ನಮ್ಮ ಕೆಲವು ಪ್ರಾಧ್ಯಾಪಕರಿಗೆ ತಾವೆಲ್ಲ ನೇರವಾಗಿ ದೇವಲೋಕದಿಂದ ಬಂದವರೆಂಬಷ್ಟು ಹೆಮ್ಮೆ!!! ಇದ್ದುಕೊಳ್ಳುತ್ತು.

ಆ ಕಾಲದಲ್ಲಿ ಯಾವಾವ ಅಧ್ಯಾಪಕ ಪ್ರಾಧ್ಯಾಪಕರಿಗೆ ತಿಂಗಳಿಗೆ ಎಷ್ಟೆಷ್ಟು ಸಂಬಳವೆಂದು ನಿರ್ಣಯಿಸಲು ಅಲ್ಲಲ್ಲಿ ಸಮಿತಿಗಳನ್ನು ನೇಮಿಸುವಾಗ ಅಂಥ ಸಮಿತಿಗಳಲ್ಲಿ ಕೆಲವು ಸ್ಥಳೀಯ ಅಧ್ಯಾಪಕ ಪ್ರಾಧ್ಯಾಪಕರೂ ಇರುತ್ತಿದ್ದರು.

ಅಂದು, ಬಹುಶಃ ಇಂದು ಸಹ, ಇಂಗ್ಲಿಷ್ ಪಾಠ ಹೇಳುವವನು ಬಹು ಮೇಲ್ಪಂಕ್ತಿಯ ಮಾನವನು! ಅವನ ತಲೆಬಿನ 'ಕ್ರೀಟ' ಒಂದು ಬೇರೆ. ಗಣಿತ, ಚರಿತ್ರೆ, ವಿಜ್ಞಾನಾದಿ ಪಾಠ ಹೇಳುವವರಿಗೆ ಇನ್ನೊಂದು 'ಗ್ರೇಡು'. ವ್ಯಾಯಾಮ, ಚಿತ್ರಕಲೆ, ಕೈಗಾರಿಕೆಗಳ ಬೋಧಕರಲ್ಲಿ ಎಷ್ಟೇ ತಜ್ಞರಾದರೂ ಅವರು ದಲಿತವರ್ಗದವರು, ಸಂಸ್ಕೃತ, ಪರ್ಷಿಯನ್, ಉರ್ದು ಮತ್ತು ದೇಶೀಯ ಭಾಷಾ ಬೋಧಕರು ಅಸ್ಪೃಶ್ಯರು.

ಆ ಕಾಲದಲ್ಲಿ ರೂ. 50/= ರೂ. 100/= ಎಂದರೆ ಭಾರೀ ದೊಡ್ಡ ಹಣ. ದೇಶೀಯ ಭಾಷಾ ಅಧ್ಯಾಪಕರಿಗೆ ತಿಂಗಳಿಗೆ ರೂ. 60/= ಮತ್ತು ಪ್ರಾಧ್ಯಾಪಕರಿಗೆ ರೂ. 100/= ಕೊಡುವುದು ಉಚಿತವೆಂದು ಆ ಸಮಿತಿಯ ಅಧ್ಯಕ್ಷ ಆಂಗ್ಲ ವಿದ್ಯಾಧಿಕಾರಿ ಹೇಳುತ್ತಿದ್ದಾಗ ಇತರ ಸದಸ್ಯರು, ಇಂಗ್ಲಿಷ್, ಗಣಿತ, ಚರಿತ್ರೆ ಇತ್ಯಾದಿ ಬೋಧಕರು, ಅಥವಾ ಪ್ರಾಚಾರ್ಯರು, ಅಥವಾ ಪ್ರಾಧ್ಯಾಪಕರು, ಅಥವಾ ಪ್ರೊಫೆಸರುಗಳು, ಅಥವಾ ಕುಲಪತಿಗಳು, ಅಥವಾ ಉಪಕುಲಪತಿಗಳು- ಯಾರೇ ಆಗಲಿ, ನಮ್ಮವರು, ಏನು ಹೇಳುತ್ತಿದ್ದರೆಂದು ಗೊತ್ತೆ?

"ಹೌದು – ಸಾರ್, ಸಾರ್, ತಿಂಗಳಿಗೆ ರೂ. 60/- ಮತ್ತು ಕಾಲೇಜು ಅಧ್ಯಾಪಕರಿಗೆ ರೂ. 100/-, ನಮ್ಮ ಸಂಸ್ಕೃತ, ಉರ್ದು, ಕನ್ನಡ, ಹಿಂದೀ, ತಮಿಳು ಬೋಧಕರಿಗೆ ಅದು ತುಂಬಾ ಆಯಿತು. ಈ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ಅವರಿಗೆಲ್ಲ ತಿಂಗಳಿಗೆ ರೂ. 35 ಅಥವಾ 40, ಮತ್ತು ಕಾಲೇಜುಗಳಲ್ಲಿ ಬೋಧಿಸುವವರಿಗೆ ರೂ. 75 ರಂತೆ ಸಾಕು, ಎಂದೆನ್ನುವರು. ಇದು ಅಂದಿನ ಮತ್ಸರೀ ಪ್ರಾಧ್ಯಾಪಕರ ಸೂಚನೆ.

ಇದನ್ನು ಆಲಿಸಿ 'ಆ ಸಮಿತಿಯ ಅಧ್ಯಕ್ಷ, ಆಂಗ್ಲ

ವಿದ್ಯಾಧಿಕಾರಿಯು ತನ್ನ ಕುಚೇಷ್ಟೆ ಮೀರಿದೆಯೆಂದರಿಯುತ್ತ ಮರುಗುತ್ತಿದ್ದನು. ಇದೇನು ಇವರಲ್ಲಿ ತಮ್ಮ ವಿಷಯಗಳಲ್ಲಿ ಕಲಿತಿದ್ದ ಪಾಂಡಿತ್ಯಕ್ಕಿಂತ ಹೆಚ್ಚಿನ ವಿದ್ವತ್ತನ್ನು ತಮ್ಮ ಭಾಷಾಭ್ಯಾಸದಲ್ಲಿ ಪಡೆದ ಮೇಲೂ ತಮ್ಮವರೇ ಆದ ಭಾಷಾಬೋಧಕರಿಗೆ ಇಷ್ಟು ಕಡಿಮೆ ಸಂಬಳವನ್ನು ನಿಗದಿಗೊಳಿಸಲು ಮಾಡುತ್ತಿದ್ದಾರಲ್ಲಾ ಎಂದು ತನ್ನೊಳಗೇ ಆಲೋಚಿಸುತ್ತಾ ಕಡೆಗೆ ಹೀಗೆಂದನು:-

"Gentlemen, listen, ನೀವಿತ್ತ ಸಲಹೆಯ ಪ್ರಕಾರ ನಮ್ಮ ಭಾಷಾ ಬೋಧಕರಿಗೆ ಇಷ್ಟು ಸಂಬಳ ತುಂಬಾ ಕಡಿಮೆ ಆಯಿತು," ಎಂದೆನ್ನುತ್ತಾ ಅವನು ಹತ್ತು ಹತ್ತು ರೂಪಾಯಿಗಳಂತೆ ಆ ಮೊಬಲಗನ್ನು ಹೆಚ್ಚಿಸುತ್ತಾ ವಿವರಿಸಿದಾಗ. ನಮ್ಮ ನಿಲುವಂಗಿಯ, ಜರಿ ರುಮಾಲಿನ, ಕಂಚಿ ಶಾಲಿನ, ಮತ್ಸರ ಹೃದಯದ, ಹೆಚ್ಚು ಮೋರೆಯ ನಿಧಾನ್ಯರು, "Yes, Sir, Yes, Sir," ಎಂದೆನ್ನುತ್ತಾ ನಿರ್ವಾಹವಿಲ್ಲದೆ ತಲೆಯನ್ನು ಕುಲುಕಿದರು. ಇಂದೂ ಅಂತಹವರು ಎಷ್ಟಿಲ್ಲ?

ಆ ಕಾಲದಲ್ಲಿ ದೇಶೀಯ ಭಾಷಾ ಬೋಧಕರನ್ನು "ಪಂಡಿತ" ರೆಂದು ನಿರ್ಲಕ್ಷಿಸಿ ಹಿಂದಿಕ್ಕಿದ್ದ ಆಂಗ್ಲರಲ್ಲ; ಕೇಳಿರಿ! ನಮ್ಮ ಪ್ರಾಧ್ಯಾಪಕ ಕುಲವು, ಅಥವಾ ಇತರ ಶಾಖೆಗಳ ಬೋಧಕ ವರ್ಗವು ತಮ್ಮ ಪ್ರತಿಷ್ಠೆಯನ್ನು ತೋರಿಸಲು ವಿದ್ಯಾ ಇಲಾಖೆಯೊಂದರಲ್ಲೇ ನಾಲ್ಕಾರು ಜಾತಿಗಳನ್ನು ಆ ರೀತಿ ನಿರ್ಮಿಸಿದ್ದಾರೆ. ಅದೇ ತರಹದ ಮನೋಭಾವದಿಂದ ಕಾಣುವವರೇ ಇಂದಿನ ಕೆಲವು ಸಾಹಿತಿಗಳು, ಹಲವು ವಿಮರ್ಶಕರು, ತಜ್ಞರು, ಪ್ರಾಜ್ಞರು, ಸರ್ವಜ್ಞರು ಇತ್ಯಾದಿ!

ತಾವು ಕಲಿತುದು ಮಹಾ ಬ್ರಹ್ಮವಿದ್ಯೆಯೆಂದೆಣಿಸಿ ಜನಸಾಮಾನ್ಯರಿಗೆ ಮಂಕುಬೂದಿಯನ್ನೆರಚಲು ಇಂಥ ದುರಹಂಕಾರದ ಮರ್ದನೆ ಮಾತ್ರ ಬರೆಹ! ಬಹು ಹಿಂದೆ ಇತರರ ಗ್ರಂಥಗಳನ್ನು ಕುರಿತಾಗಿ ಹಾಗೆ ತಮ್ಮ ಪುಸ್ತಕವನ್ನು ತೋರಿಸುತ್ತಿದ್ದವರನ್ನು ಅಂತೇಕೆ ದ್ವೇಷದಿಂದ ಬರೆದಿರುವಿರೆಂದು ನಾನು ಪ್ರಶ್ನಿಸಿದಾಗ ಅವರಲ್ಲಿ ಸಿದ್ಧ ಉತ್ತರವಿರಲಿಲ್ಲ. ಆ ಮೇಲೆ ಇತ್ತೀಚೆಗೆ ನನ್ನ ಕೃತಿಗಳ ಬಗ್ಗೆ ಅಂತೇಕೆ ಬರೆದಿರಿ, ತಮ್ಮ ತಲೆಬೇನೆಗೆ, ಹೊಟ್ಟೆಬಾಧೆಗೆ ಕಾರಣವೇನು ಎಂದು ನಾನು ಅಲ್ಲಿಂದಲೇ ಬರೆದು ಕೇಳಿದಾಗಲೂ ಅವರ ಉತ್ತರವಿಲ್ಲ, 'ಮೌನಂ ಪಂಡಿತ ಲಕ್ಷಣಂ' ಎಂತೆ!

ಬರೆಯುವ ಕೆಲಸದಲ್ಲಿ ಬರೆಯಲೇ ಬೇಕು! ತಿದ್ದುಗೆಗಳಿದ್ದರೆ ತಿದ್ದಬೇಕು. ಹೊಲಸು ಬರೆಹ, ಕೃತ್ರಿಮ ಬರೆಹ, ದುಷ್ಟತನದ

ಬರೆಯುವವನ್ನೆಲ್ಲ ಖಂಡಿಸಬೇಕು; ಅಂತದ್ದನ್ನು ನೋಡಿಯೂ ನೋಡದಂತೆ ಇರತಕ್ಕದ್ದು ಸರಿಯಲ್ಲ. ನನ್ನ ಊರು ಮತ್ತು ನಾಡಿನಲ್ಲಿ ಅಂಥ ಬರೆಹಗಾರರನ್ನು ಕಂಡು ಹಲವು ವರ್ಷಗಳ ಕಾಲ ನಾನು ಸುಮ್ಮನಿದ್ದೆನು; ಅಂತವರನ್ನು ಎಚ್ಚರಿಸುತ್ತ ಬಂದೆನು; ಕಡೆಗಂತೂ ನಾನು ಹೇಳತಕ್ಕುದನ್ನು ಹೇಳಲೇ ಬೇಕಾಯಿತು. ಇಲ್ಲಿ ಕೆಲವರ ಲೇಖನಿ ವ್ಯಾಪಾರವನ್ನು ಕಂಡು ನನಗೆ ತುಂಬಾ ಆಶ್ಚರ್ಯವಾಯಿತು. ಕರ್ನಾಟಕದಲ್ಲಿ ಅಂತವರು ಇದ್ದಾರೆ; ಬೇರೆಡೆಯೂ ಇದ್ದಾರೆ. ಹೇಗೂ ನಾನು ಹೇಳತಕ್ಕುದನ್ನು ಹೇಳಿದೆನು. ಅದರ ಮೇಲೆ ಕೆಲವರು ಅಪಪ್ರಚಾರ ನಡೆಸುತ್ತಾರೆ, ಸರಿ; ಆದರೇನು? ಕಡೆಗಂತೂ ಉಳಿಯುವುದು ಸತ್ಯ!

ಟಿಪ್ಪು ಸುಲ್ತಾನನು ೨೦೦ ವರ್ಷಗಳಿಗೆ ಹಿಂದೆ ಇದ್ದವನು. ಅವನು ಹಚ್ಚಿದ ಮರವು ಬಹಳ ಆಳಕ್ಕೆ ಬೇರು ಬಿಟ್ಟಿರುತ್ತದೆ. ಆ ಬೇರು ಅದೆಷ್ಟು ಕೊಳೆತಿದ್ದರೂ ಅದನ್ನು ಕಿತ್ತೊಗೆಯುವುದು ತುಂಬಾ ಕಷ್ಟ. ಹಾಗಿದ್ದರೂ ನಾನು ಕೊಂಚ ಗುದ್ದಲಿಗಳನ್ನು ಹೊತ್ತು ಆ ಬೇರನ್ನು ಕಿತ್ತುಹಾಕಲು ಪ್ರಯತ್ನಿಸಿದ್ದೇನೆ. ಟಿಪ್ಪು ಕರ್ನಾಟಕದವನು. ಕರ್ನಾಟಕದಲ್ಲಿ ಅದೆಷ್ಟೋ ಇತಿಹಾಸ ಪಂಡಿತರು ಇದ್ದಾರೆ; ಅವರೆಡೆಯಲ್ಲಿ ತೀರಾ ಅನರ್ಥ, ಅಶ್ಲೀಲ ವಿಚಾರ ಬರೆಯುವ ವಿಮರ್ಶಕರೂ ಇದ್ದಾರೆ. ಇಂತವರೊಡ್ಡ ನಮ್ಮ ದೇಶಕ್ಕೆ ವಿಚಾರಗಳನ್ನು ಸ್ಪಷ್ಟಪಡಿಸಬೇಕು. ಅವರಿಂತೆ ಸಗು ವಾದಿಲ್ಲ; ಅವರೇ ವ್ಯಾಪ್ಯಪಿಕಾರೇ ಹೊದು! ಬೇರೆಯವರು ಬರೆದುದನ್ನು ಹಳಿಯುವ ಈ ಜನ ವರ್ಗ ಹಾಗೆಯೇ ಅಂಬದಕ್ಕೆ ನನ್ನ ಮಿತ್ರರೊಬ್ಬರು ಹೀಗೆ ಹೇಳಿದರು:-

"---- Perhaps terrified by that Tiger reputation, most authors and politicians unwittingly contented themselves by squeaking a mouse-like tribute to Tipu's fancied virtues---- This illustrates how even the ghost of a tiger has enough scare power to extract routine tribute from pusillanimous run-of-the-mill writers.

"Professional discretion also dissuades non-Muslim writers from saying anything too harsh against a numerically large minority community lest our bureaucracy deny them pelfs of office such as an examinership, headship of an institution, a seat in the

University senate etc. It is such selfish and scare motives which continue to perpetuate in Hindusthan that we find some people writing fawning histories paying fulsome tribute to the alien tyrants of the medieval times. That, we say, is irrational and absurd!

ಈ ಮೇಲಿನ ಹೇಳಿಕೆಯಲ್ಲಿರುವ ನಿಗೂಢ ಸತ್ಯವನ್ನು ತಿಳಿಯಲು ಇದನ್ನು ಒಮ್ಮೆ ಅಲ್ಲ, ಎರಡು ಬಾರಿ ಓದಬೇಕು. ನಮ್ಮ ಪ್ರಾಧ್ಯಾಪಕ ವರ್ಗದ ಮನಸ್ಸ್ಥಿತಿಯು ಮುಖ್ಯ ಹಾಗೆ ಇದೆ. ಈ ಜನ ಹಾಗೆ ಇದ್ದದ್ದು ನಮ್ಮ ರಾಜಕೀಯದ ಜನಕ್ಕೆ ಇನ್ನಷ್ಟು ಉಪಕಾರವಾಯಿತು. ನಮ್ಮ ವಿದ್ಯಾನೀತಿ ನೈತಿಕ ನಿಲುವುಗಳು ಇಳಿಮುಖವಾಗಲು ಕೆಲವು ಕಾರಣಗಳು ಮೇಲಿನ ಹೇಳಿಕೆಯಲ್ಲಿವೆ.

ಮಾನವನು ಸರ್ವವನ್ನು ಜಯಿಸಿರುವನಾದರೂ ತನ್ನನ್ನೇ ತಾನು ಮಾತ್ರ ಇಂದಿಗೂ ಜಯಿಸಲಿಲ್ಲವೆಂಬುದಕ್ಕೆ ನಮ್ಮ ಕಾಲೇಜು ಕಚೇರಿಗಳಲ್ಲಿ ಉದ್ಭವಿಸುವ ಹಾಸ್ಯದ ಪ್ರಾಧ್ಯಾಪಕ ಕಲಹವನ್ನು ಅಂಥ ಕಲಹಗಳ ಗತಿಗಳನ್ನು ನೋಡಿದಾಗ ತಿಳಿಯಬಹುದು. ನಮ್ಮ ಸಾಹಿತಿಗಳಲ್ಲಿ ಓರ್ವಿಬ್ಬರಿಗೆ ಏನಾದರೂ ಸನ್ಮಾನ ಪ್ರಶಸ್ತಿಗಳು ದೊರಕಿದಾಗ ನಮ್ಮ ಪ್ರಾಧ್ಯಾಪಕ ವರ್ಗದ ಪ್ರತಿಕ್ರಿಯೆಯನ್ನು ನೋಡಬೇಕು. ಪಾಪ, ಆಗಲೂ ಕೆಲವರಿಗೆ ನಿದ್ದೆಯೇ ಇಲ್ಲ. ಅವರ ಅಂತರಂಗದ ಕೊಳಕಿನ ಜತೆಗೆ ಬಹಿರಂಗ ಟೀಕೆಯಂತೂ ಕೇವಲ ಅಸಹ್ಯ! ಪ್ರಾಯ ಎಂಬತ್ತೇ ಆಗಲಿ, ತೊಂಬತ್ತೇ ಆಗಲಿ ಎಲ್ಲರೂ ಅಂಥ ಆಲಾಯಕರ ಟೀಕೆಗೆ ಪಾತ್ರರೇ! ಇದನ್ನೆಲ್ಲ ಸ್ವತಃ ನೋಡಿ ತಿಳಿಯಬೇಕಲ್ಲದೆ ನನ್ನಂತವನು ಬರೆದರೆ ಸಾಲದು.

ಅಂತವರಿಗೆ ಪಾಶ್ಚಾತ್ಯ ವಿದ್ವಾಂಸರನ್ನು ಹೊಗಳಿದರೆ ಮಾತ್ರ ಹೊಟ್ಟೆಬೇನೆಯಿಲ್ಲ. ಪಾಶ್ಚಾತ್ಯ ದೇಶದಲ್ಲಿರುವ ನಾನು ಸಹ ನಿಂದ್ಯನೇ! ಬಹಳ ಹಿಂದೆ ನಾನು ಕಂಡ ಒಂದು ವಿಷಯವೆಂದರೆ ಈಗ ಜ್ಞಾನಪೀಠ ಪ್ರಶಸ್ತಿ ಪಡೆದಂತವರ ಕೃತಿಗಳನ್ನು ಸಹ ಅವು ಪ್ರಕಟಣೆಗೆ ತಕ್ಕದಾಗಿವೆಯೋ ಎಂದು ನೋಡಲು ಬಿಳಿಯರಿಗೆ ಗುಮಾಸ್ತರೆ ಕಳಿಸಾಗಿತ್ತು, ಇಂತವರು ಈಗಲು ಸ. ಹ. ವಿವಿಧ ವೇಷಗಳಿಂದ ತೋರ್ಪಡಿಸಿಕೊಳ್ಳುತ್ತಿದ್ದಾರೆಂಬುದೂ ನಿಜ!

ನಮ್ಮ ಹೊಸ ನಮೂನೆಯ ಪ್ರಾಧ್ಯಾಪಕ ತಜ್ಞರು ಈ ೨೦ನೇ ಶತಮಾನದಲ್ಲಿ ಉತ್ಪಾದಿತರಾದವರು. ಈ ಪ್ರಾಜ್ಞರ ವಿದ್ವತ್ತಿನ ಕ್ರಮ ಹೀಗೆ! ಒಂದು ವಿಶಿಷ್ಟ ಕೃತಿಯನ್ನು ಹಿಡಿದುಕೊಂಡು ಅದರಲ್ಲಿರುವ ತಪ್ಪುಗಳೆಷ್ಟು, ಮುದ್ರಣ ತಪ್ಪು, ಆ ತಪ್ಪು, ಈ ತಪ್ಪುಗಳಿಂದೆನ್ನುತ್ತಾ ಬಹಳ ಕಷ್ಟದಿಂದ ಒಂದು ಪಟ್ಟಿ

ಯನ್ನೆ ತಯಾರಿಸಿದಾಗ ಅದು ಭಾರೀ ಸಂಶೋಧನೆಯಾಯಿತು. ಆ ಪತ್ರಿಯನ್ನು ಅದೇ ಮಾದರಿಯ "ತಜ್ಞ"ರೆಂದೆನಿಸಿದ ಅವರ "ಗುರು"ಗಳಿಗೆ ತೋರಿಸಿ ಅವರಿಂದ ಶಹಭಾಸ್‌ಗಿರಿ ಪಡೆದಾಗ ಅವರಿಗೆ ಆ ವಿಷಯದಲ್ಲಿ ಸರ್ವಸ್ವಾಮ್ಯ ಆದರು. ಹಾಗೆಯೇ ಪ್ರಶಸ್ತಿ, ಹಾಗೆಯೇ ಪ್ರಚಾರ, ಹಾಗೆಯೇ ಜೀವನ ಹಾಗೂ ಜೀವನೋಪಾಯ!

ಹೀಗೆ ನಮ್ಮ ದೇಶದಲ್ಲಿ ಮಾತ್ರವಲ್ಲ; ಪಾಶ್ಚಾತ್ಯ ದೇಶಗಳಲ್ಲೂ ಈ ೨೦ನೇ ಶತಮಾನದ ಮಾಲಾಜಾಲದ ಮಟ್ಟು ಇಷ್ಟೇನೆ! ಹಾಗಾದುದರಿಂದಲೇ ಹಿಂದಿನ ಶತಮಾನಗಳಿಗೂ ಹಿಂದಿನ ಧೀಮಂತ ಸಾಹಿತಿಗಳ, ಸಂಶೋಧಕರ Original works ಇವಕ್ಕೆ ಸಮನಾದ ಕೃತಿಗಳು ಇಂದು ಹೆಚ್ಚು ಕಾಣುವುದಿಲ್ಲ. ಹಿಂದಿನ ಉದ್ದಾಮ ಕೃತಿಗಳು ಮಾಯವಾದವುಗಳೇ ಇಂದಿನ ಜನದ, ವಿದ್ಯಾರ್ಥಿ ವರ್ಗದ ಸಾಹಿತ್ಯ! ಆದರೂ ತಾವು ಅದು ಮಾಡಿದ್ದೇವೆ, ಇದು ಮಾಡಿದ್ದೇವೆಯೆಂದು ಸತ್ವಿಲ್ಲದೆ ತಮ್ಮ ಮೀಸೆ ತಿರುವಿಕೊಳ್ಳುತ್ತಾರೆ. ಸುಮಾರು ಮೂವತ್ತು ವರ್ಷಗಳಿಂದೀಚೆಗಂತೂ ಸಾಹಿತ್ಯ ಸಂಸ್ಥೆಗಳನ್ನು ಕುರಿತಾದ ಬರಹಗಳ ಮೇಲೆ, ಪ್ರಚಾರ, ವ್ಯಾಪಾರವೆಲ್ಲ ಪುಸ್ತಕ ಪ್ರಕಾಶಕರ ಕೈಸೇರಿಯಾಗಿದೆ. ಹೀಗಾಗಿ ಇಂದಿನ ಓಕ್ಸ್‌ಫರ್ಡ್, ಮೆಕ್‌ಮಿಲನ್, ಹಾರ್ವರ್ಡ್ ಮೊದಲಾದ ಹಿಂದಿನ ಕಾಲದಲ್ಲಿ ಪ್ರಸಿದ್ಧವಾಗಿದ್ದ ಪುಸ್ತಕ ಪ್ರಕಾಶಕರು ಸಹ ಬರೀ ತಮ್ಮ ವ್ಯಾಪಾರ ದೃಷ್ಟಿಯಿಂದ ಕಂಡಾಬಟ್ಟೆ ಹುರುಳಿಲ್ಲದ ಪುಸ್ತಕಗಳನ್ನು ಪ್ರಕಟಿಸಿಕೊಂಡು ವ್ಯಾಪಾರ ನಡೆಸುತ್ತಾರೆ.

ರಾಜಕೀಯದ ಜನ ತಮ್ಮ ಜೀವನ ಚರಿತ್ರೆಯನ್ನು ಬರೆಸಿ ಅಥವಾ ಬರೆಯಿಸಿ ತಮ್ಮ ಪ್ರತಿಷ್ಠೆಯನ್ನು ತೋರಿಸುವಂತೆ, ಕೇವಲ ರಾಜಕೀಯವಾಗಿ "ಕ್ರಾಂತಿ, ಕ್ರಾಂತಿ"ಯೆಂದೆನ್ನುತ್ತಾ ಆಯಾ ಸರಕಾರಗಳ ಹಣದಿಂದ "ಕ್ರಾಂತಿ ಸ್ಥಾಪನೆ"ಗೆಂದೆನ್ನುತ್ತಾ ಓಡಾಡುತ್ತಾ ದಿನಗಳೆದ ಸರಕಾರೀ ಜನಕ್ಕೆ ನೊಬೆಲ್ ಪಾರಿತೋಷಕವನ್ನೇ ಕೊಡುವಂತೆ, ಅಧಿಕಾರದಲ್ಲಿರುವವರನ್ನು ಕರೆಸಿ ನಮ್ಮ ವಿಶ್ವವಿದ್ಯಾಲಯಗಳು ಅವರಿಗೆ ಡಾಕ್ಟರೇಟ್ ಪದವಿಯನ್ನು ಕೊಡುವಂತೆ ಅದೆಷ್ಟೋ ನಕಲೀ ವಿದ್ಯಮಾನಗಳು ಎಲ್ಲೆಲ್ಲೂ ಅದೆಷ್ಟು ನಡೆಯುತ್ತಿವೆ! ಇದನ್ನೆಲ್ಲ ನಮ್ಮ ಇಂದಿನ ವಿದ್ಯಾರ್ಥಿ ವರ್ಗಕ್ಕೆ ಬಗೆಹರಿಸಲು ಸಾಧ್ಯವಿದೆಯೇ? ಖಂಡಿತಾ ಸಾಧ್ಯವಿಲ್ಲ, ಏಕೆಂದರೆ ಈ ಹಲವು ಅನಾಚಾರಕ್ಕೆ ಅವರೂ ಭಾಗಿಗಳು! ನಮ್ಮ ಒಂದು ರಾಜ್ಯದ ಮುಖ್ಯಮಂತ್ರಿಯೊಬ್ಬ ಪ್ರಾಧ್ಯಾಪಕನನ್ನು ಕರೆದು ಎರಡು ಬಾರಿ ಹಿಂದೇ ಪರೀಕ್ಷೆಯಲ್ಲಿ ಸೋಲನ್ನು ಪಡೆದ ತನ್ನ ಮಗಳನ್ನು ಈ ಬಾರಿ ಹೇಗೂ ಮೇಲಕ್ಕೆ ತಳ್ಳು ಎಂದೆನ್ನುವಾಗ ಅವನು ಬಾಯಿಮುಚ್ಚಿಕೊಂಡು ಅಂತೇ ಮಾಡಿದನು. ಇಂಥ ನಮ್ಮ ಆಳರಸರ ಸಂಖ್ಯೆ ಅದೆಷ್ಟು!

ಇಂಥ ಪ್ರಾಧ್ಯಾಪಕ ವರ್ಗವೇ ನಮ್ಮಲ್ಲಿ ಸಾಮಾನ್ಯರ ಮೇಲೆ ತಮ್ಮ ದರ್ಪ, ತಮ್ಮ ಸೋಂಬೇರಿತನ, ತಮ್ಮ ಮತ್ಸರಪೂರ್ಣ ವಿಮರ್ಶೆ ಇತ್ಯಾದಿಗಳಲ್ಲಿ ತಲ್ಲೀನರಾಗಿ ಅಲ್ಲಿಲ್ಲಿ ಸಾಹಿತ್ಯ "ಅಕಾಡೆಮಿ ತಿಕಡಮ್ಮಿ ಗಿಮಿಗಿಮ್ಮಿ"ಗಳಲ್ಲಿ ಸನ್ಮಾನಗಳನ್ನು ಪಡೆಯಲು ಹೋಗುತ್ತಾರೆ, ಇಂಥವರಿಂದ ಒಳ್ಳೆಯ ಸಾಹಿತ್ಯದ ಮಾತೇನು ಹೋಗಲಿ, ನೈತಿಕವಾಗಿಯೂ ಎಂಥ ಜನಾಂಗವನ್ನು ರೂಪಿಸಲು ಸಾಧ್ಯವಿದೆ? ಇವರು ಎಂಥ ಜನಾಂಗಕ್ಕೆ ಹೇಳುವ ಹೀನರು, ಗೊತ್ತೆ? ತಮಗೆ ಬೇಕಾದವರನ್ನು ಅವರ ಕೃತಿಗಳನ್ನು ಅವು ಏನೇ ಆಗಲಿ, ಹೊಗಳುತ್ತಾ ತಮಗೆ ಬೇಡದವರನ್ನು ಅವರ ಕೃತಿಗಳನ್ನು ಅವು ಎಷ್ಟೇ ಉತ್ಕೃಷ್ಟವಾಗಿದ್ದೇ ಇರಲಿ, ಅವನ್ನೆಲ್ಲ ತೆಗಳುತ್ತಾ ಅವಹೇಳನದ ಅಟ್ಟಹಾಸದಲ್ಲಿ ನಿರತರಾಗುತ್ತಾ ಇರುವುದೇ ಅವರ ಜೀವನ! ಇದೇ ಪುರಸ್ಕಾರವೇ ತಪ್ಪೆಂದು ತಿಳಿಹೇಳುವಾಗ ಅವರಿಗೆ ಅತಿ ಉತ್ಸಾಹ! ತಪ್ಪುಗಳ ಪಟ್ಟಿಮಾಡಿದಾಗ ಅದು ಅವರ ತಜ್ಞತೆ! ಹೀಗೆ ನಾವು ಪತ್ರಿಕೆಗಳಿಂದ ಸಂಗ್ರಹಿಸಿಕೊಂಡ ಹಲವು ಪ್ರಸಿದ್ಧ ಸಾಹಿತಿಗಳನ್ನು ಇಲ್ಲಿ ಹೆಸರು ಹಾಕಿಕೊಂಡ ಬೇರೆ ಬೇರೆಯೂ ಇರುವುದನ್ನು ನಾನು ಬಲ್ಲೆ!

ನಮ್ಮ ಜನದ ನಡತೆ, ತಜ್ಞತೆಯ ಅಹಂಕಾರವೆಂದರೆ ಹೀಗೆ! ಯಾವುದೊಂದನ್ನೂ ಬೇಯಿಸಿ ತಯಾರಿಸಲು ಗೊತ್ತಿಲ್ಲದ ಹೊಟ್ಟೆಬಾಕನು ಪಕ್ವಾನ್ನವನ್ನು ತಿಂದು ತೇಗಿ ರುಚಿಗೆಟ್ಟು ಆ ಅಡಿಗೆಯವನಿಗೆ ಸರಿಯಿಲ್ಲ, ಉಪ್ಪಿಲ್ಲ, ಖಾರ ಹೆಚ್ಚು ಎಂದಿತ್ಯಾದಿಯಾಗಿ ಹೇಳುತ್ತ, ಇತರರ ಪ್ರಯತ್ನವನ್ನು ಕಡೆಗಣಿಸುವಂತೆಯೇ ನಮ್ಮ ಪ್ರಾಧ್ಯಾಪಕರು ಇತರರ ಬರಹಗಳನ್ನೆಲ್ಲ ರಹಸ್ಯವಾಗಿ ತಮ್ಮ ಸ್ವಲಾಭಕ್ಕೆ ಆಸ್ವಾದಿಸಿ ಅನಂತರ ಅವು ಏನೂ ಸರಿಯಿಲ್ಲ, ತೀರಾ ತಪ್ಪು ಎಂದೆನ್ನುತ್ತಾ ಪ್ರಚಾರ ಮಾಡಿದಾಗ ಕೃತಿಕರ್ತೃವಿನ ಮಾನಹಾನಿಯನ್ನು ಕಾಣಬಹುದು. ಅದನ್ನ libel ಎಂದೇ ಕರೆಯಿರಿ, slander ಎಂದೇ ಹೇಳಿ, abuse ಎಂದೇ ತಿಳಿದುಕೊಳ್ಳಿ. ನಮ್ಮ ವಿಶ್ವವಿದ್ಯಾಲಯಗಳೊಳಗಿರುವ ನಿಸ್ಸೀಮರು ತಮ್ಮ ಅಹಂಭಾವವನ್ನು ತಮ್ಮ ಹಿತವನ್ನು ಗಮನಿಸಿ ತೋರಿಸುವ ರೀತಿ ಅದು!

ಆದರೆ ಇಂಥ ದುರಾಗ್ರಹಗಳ ಮೇಲೆ ಯೂರೋಪು ಮತ್ತು ಅಮೇರಿಕಾದಲ್ಲಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಗೆದ್ದ ಹಲಕೆಲವು ಸಾಹಿತಿಗಳನ್ನು ನನಗೆ ಗೊತ್ತಿದೆ. ಅದಕ್ಕೆ ತಕ್ಕ ಕಾನೂನು ಅಲ್ಲಿ ಇದೆ. ನಮ್ಮ ಬಡದೇಶದಲ್ಲಿ ಕಾನೂನಿಗೂ ಬಡತನವೇ! ನ್ಯಾಯಕ್ಕೆ ಸಹಸ್ರಾರು ರೂಪಾಯಿ ಬೇಕಾಗಿದೆ, ನಮ್ಮ ಬಡಸಾಹಿತಿಗಳಿಗೆ ಅಷ್ಟೆಲ್ಲ ಹಣವಲ್ಲಿದೆ? ನಮ್ಮ ಸಿರಿವಂತ ಸಾಹಿತಿಗಳೂ ಸಹ ತಮ್ಮ ಹಣವನ್ನು ಆ ರೀತಿ ಖರ್ಚು ಮಾಡಲಾರರು, ಏಕೆಂದರೆ ಅವರಲ್ಲಿರುವ ಹಣವು ಅವರು ಕಷ್ಟಪಟ್ಟು ಪಡೆದುದು; ದುರ್ವ್ಯವಹಾರ, ವ್ಯಾಪಾರಗಳಿಂದಲ್ಲ. ಹಾಗಾಗಿ

ನಮ್ಮ ಬಾಯಿಬಡುಕರಿಗೆ, ಇತರರ ಕೃತಿಗಳ ಮೇಲೆ ಅಪಪ್ರಚಾರ ಮಾಡುತ್ತ ಆನಂದಪಡುವವರಿಗೆ, ಅದೆಲ್ಲ ಅನುಕೂಲವೇ ಆಯಿತು; ಇದೆಲ್ಲ ಜನಸಾಮಾನ್ಯರಿಗೆ ಅರ್ಥವಾಗುವ ವಿಷಯವೂ ಅಲ್ಲ.

ಏನೇ ಇರಲಿ; ನನಗೆ ಇವರ ಕುಹಕ ವ್ಯಾಪಾರ ಒಂದಿಷ್ಟು ಅರ್ಥವಾಗಿದೆ. ನಾನೇನೋ ಅಲ್ಲಿಲ್ಲಿ, ಎದ್ದುಬಿದ್ದು, ಎಡವಿತಡವಿ, ಅಲ್ಪಸ್ವಲ್ಪ ಬರೆಯುತ್ತಿರುವವನಾದುದರಿಂದ ಈ ಎಲ್ಲ ವಿಚಾರಗಳನ್ನು ನನ್ನ ಅನುಭವದಿಂದಲೇ ಹೇಳಿದ್ದೇನೆ. ನನ್ನ ಈ ತರಹದ ನಿಲುವಿಂದ ಕಥೆಯನ್ನು ಬರೆದುದರಿಂದ ನಷ್ಟವನ್ನು ಪಟ್ಟಿದ್ದೇನೆ. ಹಲವರು ಹಲವು ರೀತಿಯಲ್ಲಿ ಮೋಸವನ್ನು ದ್ರೋಹವನ್ನು ಬಗೆದಿದ್ದರೂ ಅವರೆಲ್ಲರು ನತದೃಷ್ಟ ಜಾತಿಯವರಲ್ಲಿ ಎಂದು ನಂಬಿದ್ದೇನೆ. ಈವರೆಗೂ ನನ್ನ ಒಂದೇ ಒಂದು ಪುಸ್ತಕದ ಬಗ್ಗೆ ಇದನ್ನು ಮುದ್ರಿಸುವ ಪತ್ರಿಕೆ ಎಡತು, ಪುಸ್ತಕ ಪ್ರಕಾಶಕರನ್ನು ಎಡತಾಕಿ ಕೊಡುತ್ತೀರಿಯೆಂದು ಏನೊಂದು ವಿಚಾರವನ್ನು ಮುಂಚೆಯೇ ಕೇಳದೆನೇ ನನ್ನ ಸಾಹಿತ್ಯವನ್ನು ನಡೆಸಿದ್ದೇನೆ. ಹೀಗೂ ನನ್ನ ಬರೆಹವನ್ನು ನಾನು ವ್ಯಾಪಾರದ ಹ್ಯಾಲಸಿನೊಳಗೆ ಅದ್ದಲಿಲ್ಲ. ನನ್ನ ಈ ನಿಲುವನ್ನು ಹುರಿದುಂಬಿಸಿ ಯೋಗದಾನ ನೀಡಿಕೊಂಡು ಬರುತ್ತಿರುವವರು ಹಲವರು ಇದ್ದಾರೆ. ಅಂತವರ ದುರ್ವ್ಯವಹಾರವನ್ನೆಲ್ಲ ತಿಳಿದೂ ತಿಳಿಯದವನಂತೆ ವರ್ತಿಸುತ್ತಾ ಬಂದಿದ್ದೇನೆ; ನನಗೆ ಅದೇ ಹಿಗ್ಗು; ಅದೇ ಹೆಮ್ಮೆ!

ಹೀಗೆ ಜನವನ್ನು ನಂಬಿ ತಲೆದುಂಬ ಸಮಸ್ಯೆಗಳು ಹೆಚ್ಚಿದಾಗ, ಜನದ ಅಕ್ರಮ, ಅತಿಕ್ರಮಗಳನ್ನು ಮೇಲಿಂದ ಮೇಲೆ ನೋಡಿದಾಗ ಮಾನವನು ನೈತಿಕವಾಗಿ ಇದಕ್ಕಿಂತ ಮೇಲಿನ ಅಂತಸ್ತಿಗೆ ಏರಲಾರದೆ ತಡವರಿಸುತ್ತಿದ್ದಾನಲ್ಲಾ ಎಂಬುದಾಗಿ ಕೊರಗಿದ್ದೇನೆ. "ಜಗವೆಲ್ಲ ನಗುತಿರಲಿ, ಜಗದಳುವು ನನಗಿರಲಿ," ಎಂದು ಹೇಳಿದಂತೆ ನನ್ನ ಹಾಗೂ ಕೆಲವರ ಸಮಸ್ಯೆಗಳನ್ನು ನನ್ನ ಕೃತಿಗಳಲ್ಲಿ ಹೊತ್ತು ಆತ್ಮಮನಸಿನಿಂದಲೇ ಮುನ್ನಡೆದಿದ್ದೇನೆ. ಒಂದು ತತ್ವಕ್ಕೆ, ನೀತಿಗೆ, ಧ್ಯೇಯಕ್ಕೆ ಹೋರಾಡುವುದರಲ್ಲಿ ಆನಂದ ಇದ್ದೇ ಇದೆ; ಏಕೆಂದರೆ ಕಡೆಗಂತೂ ಉಳಿಯುವುದೇ ಸತ್ಯ!

ನಮಗೆ creative literature and free expression ಇರಬೇಕು. ಇದು ಇಲ್ಲದಿದ್ದರೆ ಕಲಾಸಾಗರವೇ ಕೊಳಕಾಗುವುದು; ಸಾಹಿತ್ಯವಂತೂ ಸಪ್ಪೆಯಾಗಿನಿಲುವುದು. ದಿಟ್ಟತನದ ಕಲಾವಿದರು, ಸಾಧಕರು ಮತ್ತು ಸಾಹಿತಿಗಳು ತಮ್ಮ ಆತ್ಮೋದ್ಗಾರದ ಸ್ವಾತಂತ್ರ್ಯಕ್ಕಾಗಿ ಹೀಗೆ ಬೀದಿನಾಯಿಗಳಿಂದ ಕಚ್ಚಿಸಿಕೊಂಡಿದ್ದಾರೆ, ನಮ್ಮಲ್ಲಿ ಹೀಗೋ ಹಾಗೆಯೆ ನೈತಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳಲ್ಲೆಲ್ಲ ಸತ್ಯವನ್ನು ಮಡಿಸಿ ಮಿಥ್ಯೆಯನ್ನು ಸೃಷ್ಟಿಸಿ ಕುಣಿದಾಡುತ್ತಾರೆ. ಆದರೂ ಅಂತಾ

ಮತ ಪೀಠಾಧಿಗಳ ನೀತಿಯಿಂದ ಹತ್ಯೆಗೊಳಗಾದ ಸತ್ಪುರುಷರೂ ಅಲ್ಲಲ್ಲಿ ಇದ್ದೇ ಇದ್ದಾರೆ. ಏನಿದ್ದರೂ ಕೊನೆಗಂತೂ ಉಳಿಯುವುದು ಸತ್ಯ!

ಪಾಶ್ಚಾತ್ಯರು ಬರೇ ತಮ್ಮ ನೂರಿನ್ನೂರು ವರ್ಷಗಳ ಅಧಿಕಾರಾವಧಿಯಲ್ಲಿ ಈ ದೇಶದಲ್ಲಿ ಸಾಧಿಸಿದ್ದ ಉಪಕಾರವಿದೆಯೆಂದು ಆ ಕಾಲದಲ್ಲಿದ್ದವರೇ ಹೇಳಿರುವಾಗ, "ಇವರು ಏನೂ ಮಾಡಿಲ್ಲ, ನಾವೇ ವೀರರು, ನಾವೇ ಜ್ಞಾನಿಗಳು" ಎಂದೆನ್ನುವ ನಮ್ಮ ದೇಶಾಭಿಮಾನಿಗಳು ಎಂಟುನ್ನೂರು ವರ್ಷಗಳ ಕಾಲ ಮಹಮ್ಮದೀಯರು ಈ ದೇಶದಲ್ಲಿ ನಡೆಸಿದ ಹಾವಳಿ ಅತ್ಯಾಚಾರಗಳನ್ನು ಕುರಿತಾಗಿ ಏಕೆ ಬಾಯ್ಬಿಟ್ಟು ಹೇಳುವುದಿಲ್ಲ? ಹಿಂದೂಗಳಲ್ಲಿ ಕೆಲವರು ಒಳ್ಳೆಯವರಿರುವಂತೆ ಮಹಮ್ಮದೀಯರಲ್ಲೂ ಇದ್ದಾರೆ. ಯಾವೊಂದು ಜನಾಂಗವೂ ಪೂರ್ತಿ ಒಳ್ಳೆಯದೂ ಅಲ್ಲ; ಪೂರ್ತಿ ಕೆಟ್ಟದೂ ಅಲ್ಲ! ಆದರೆ ಕ್ರಿ.ಶ. ಎಂಟನೇ ಶತಮಾನದಿಂದ ಹದಿನೇಳನೇ ಶತಮಾನದ ವರೆಗೆ ಅತ್ಯಾಚಾರ ಅದೆಷ್ಟು ನಡೆದು ಹೋಗಿದೆ. ಅದನ್ನೇಕೆ ವ್ಯಕ್ತವಾಗಿ ಹೇಳಬಾರದು? ಭಯವೇ? ಹೌದು, ಭಯ! ಅಹಂಕಾರಿಗಳಿಗೆ ಮತ್ಸರಿಗಳಿಗೆ ಭಯ ಯಾವಾಗಲೂ ಹೆಚ್ಚಂತೆ!

ನಾವು ಎಷ್ಟೇ ಅಭಿಮಾನಿಗಳಾಗಿ ನಮ್ಮಲ್ಲಿ ಇಲ್ಲದ ವೀರತನವನ್ನು ಇದೆಯೆಂದು ಹೇಳಿಕೊಂಡರೂ ನಾವು ಆ ಜಾತಿ ಈ ಜಾತಿ ಎಂಬುದಾಗಿ ಸ್ವಾಭಿಮಾನವನ್ನು ತೋರಿಸಿಕೊಂಡರೂ, ನಮ್ಮ ಅಂದಿನ ಮತ್ತು ಇಂದಿನ ಜನರ ಪ್ರಜಾರಾಜಕೀಯವೆಲ್ಲ ಉದಾತ್ತ ರಾಜನೀತಿಯಿಂದೂ ಉದಾತ್ತ ಇದ್ದರೂ ಏನೂ ಪ್ರಯೋಜನವಿಲ್ಲ. ಏಕೆಂದರೆ ಕಡೆಗಂತೂ ಉಳಿಯುವುದು ಸತ್ಯ!

ನಾನು ಇಲ್ಲಿ ಹೇಳುವ ಕೆಲವು ವಿಷಯಗಳು ಪುನರುಕ್ತವಾಗಿದ್ದರೆ ಅದು ನಮ್ಮ ಜನಕ್ಕೆ ಸ್ಪಷ್ಟವಾಗಲೆಂದೇ ಆಗಿದೆ. ನಾನು 'ಚರಿತ್ರೆ'ಗಳನ್ನು ಬರೆಯುವ ವ್ಯಾಪಾರೀ ಪ್ರಾಧ್ಯಾಪಕನಲ್ಲ. ನಾನು "ಪ್ರಾಥಮಿಕ ಶಿಕ್ಷಣ"ವನ್ನು ಪಡೆಯುವವರಿಗೆ ಪಾಠವನ್ನು ಹೇಳುವವನು, ಹಾಗಾದುದರಿಂದ ಕೆಲವು ವಿಚಾರ ಪುನರುಕ್ತವಾಗಲೂಬಹುದು, ನಾವು ಮಂತ್ರಗಳನ್ನು ಪುನರುಚ್ಚರಿಸುವುದಿಲ್ಲವೇ? ಹಾಗೆಯೇ, ಇಲ್ಲಿ ಪುನರುಚ್ಚರಿಸುವ ಪ್ರಯತ್ನ!

ಪಾಶ್ಚಾತ್ಯ ವಿದ್ವಾಂಸನೊಬ್ಬನು ರಾಮಾಯಣವನ್ನು ಭಾಷಾಂತರಿಸಿದನೆಂದು ಹೇಳಿದೆನು. ಆ ವಿಷಯ ನಮ್ಮ ಪ್ರಾಧ್ಯಾಪಕ ತಜ್ಞನಿಗೆ ತಿಳಿದಿರಲಿಲ್ಲ. ಆದರೆ "ತಪ್ಪು"ಗಳನ್ನೇ ಇನ್ನೊಬ್ಬನಲ್ಲಿ ನೋಡುವವನಿಗೆ ತನ್ನ ತಪ್ಪುಗಳು ತನ್ನ [illegible]

ಏನೂ ತಿಳಿಯುವುದಿಲ್ಲವಷ್ಟೆ! ಹೇಗೂ ತನ್ನ ಪುಸ್ತಕದ ವಿಮರ್ಶೆಯನ್ನು ಬರೆಯುವ ಭರದಲ್ಲಿ ಅವನು, "ಆ ಪಾಶ್ಚಾತ್ಯನು ರಾಮಾಯಣವನ್ನು ಭಾಷಾಂತರಿಸಿದನೆಂದು ಮಾತ್ರವಿದೆ. ವಾಲ್ಮೀಕಿಯ ವಿಚಾರವೇನೂ ಇಲ್ಲ," ಎಂಬುದಾಗಿ ಹೇಳಿದಾಗ ಅವನ ಪ್ರಜ್ಞೆಯ ಬಾಧೆಯು ಎಷ್ಟರ ಮಟ್ಟಕ್ಕೆ ಇದೆ ಎಂದು ತಿಳಿಯುತ್ತದೆ. ಆದರೆ ಇಂದು ಪರೀಕ್ಷಕರು, ಅಂತಹವನ್ನೆಲ್ಲ ಪ್ರಕಟಿಸುವ ಪತ್ರಿಕೆಗಳೂ ನಮ್ಮ ವಿಮರ್ಶಾ ನೀತಿಯ, ವಿಮರ್ಶಾ ಸಾಹಿತ್ಯದ ದುರದೃಷ್ಟವೆಂದರೂ ಸರಿ!

೬೦೦ ಪುಟಗಳ ಹಿಂದು ಪುಸ್ತಕದಲ್ಲಿ ಒಬ್ಬ ಪ್ರಾಧ್ಯಾಪಕ ಹಿಂದೇ ಹಿಂದು ತಪ್ಪು ಕಂಡುಹಿಡಿದನು. ಎರಡನೇ ತಪ್ಪು ದುರ್ಬೀನು ಮೂಲಕ ನೋಡಿದಾಗಲೂ ಅವನಿಗೆ ದೊರಕಲಿಲ್ಲ. ಆಗ ಅವನು ಏನು ಮಾಡಬೇಕು? ಆ "ತಪ್ಪು" ಏನಿದೆಯೋ ಅದನ್ನು ಎಲ್ಲೆಲ್ಲೂ ಕೇಳಿಸುವಂತೆ ಊದಿದನು. "ಈ ಗ್ರಂಥ ತೀರಾ ಇಂತಹ ತಪ್ಪುಗಳಿಂದಲೇ ಕೂಡಿದೆಯೋ ಎಂದೆನ್ನಿಸುತ್ತದೆ," ಎಂದು ಬರೆದನು. ಅಲ್ಲಿಗೆ ಅವನ ವಿದ್ಯೆ, ಅವನ ವಿಮರ್ಶೆ, ಅವನ ವಿಚಾರಜ್ಞಾನವೆಲ್ಲ ಮುಗಿಯುತ್ತದೆ. ಇಂದು ನಮ್ಮ ವಿಶ್ವವಿದ್ಯಾಲಯಗಳಲ್ಲಿರುವ ತಜ್ಞರಲ್ಲಿ ಹಲವು ಜನ ಇಂತಹವರು.

ಕೆಲವು ವಿಮರ್ಶಕರಂತೂ ಜಾತೀಯವಾದಿಗಳೆಂದು ಹಿಂದೆಯೇ ಹೇಳಿದೆನಷ್ಟೆ! ಇತ್ತೀಚೆಗೆ ದಸರಾ ಹಬ್ಬದೋಪಾದಿಯಲ್ಲಿ ಜನಸ್ತೋಮದಿಂದ ಕೂಡಿದ ಇನ್ನೊಂದು ಸಾಹಿತ್ಯ ಸಭೆಯಲ್ಲಿ ಹಲವು ಪ್ರಸಿದ್ಧ ವಿಮರ್ಶಕರು ತಕ್ಕಡಿ ನೀತಿಯ ಬಾಧೆಗೊಳಗಾದ ಹಿರಿಯ ಸಾಹಿತಿಗಳೊಬ್ಬರು ನಮ್ಮ ಕೆಲವರ ಜಾತೀಯವಾದವು ನಮ್ಮ ಸಮಾಜವನ್ನು ಹಿಡಿದು ಕಾಡಿತು. ಪಾಶ್ಚಾತ್ಯರ ಬರೋಣದಿಂದ ನಮ್ಮ ದೇಶದ ಏಕ್ಯತೆ ಬಗೆಹರಿಯಿತು, ಎಂದೆಲ್ಲ ಹೇಳುವಾಗ ಕೆಲವರು ಆಕ್ಷೇಪಿಸಿದರು. ಏಕೆ? ತಾವು ತೀವ್ರ ಜಾತೀಯವಾದಿಗಳೆಂದು ತಾವೇ ತಿಳಿದುಕೊಳ್ಳಲಾರದ ನಮ್ಮ ದೇಶದ ವಿದ್ಯಾತಜ್ಞರು, ಮೇಲು ಜಾತಿಯಂತೆ, ಕೀಳುಜಾತಿಯಂತೆ, ಬ್ರಾಹ್ಮಣವಂತೆ, ಶೂದ್ರವಂತೆ, ಏನೇನೋ ಹರಟೆಗಳಿಂದ ಕಾಲ ತಳ್ಳುವವರು. ಇವರನ್ನೆಲ್ಲ ನಾನು ಬೇರೆಡೆ ಹೇಳಿದಂತೆ ತಮಿಳುನಾಡಿನ ಪ್ರಾಂತದ ದ್ರಾವಿಡ ಸರಕಾರಕ್ಕೆ ಕಳುಹಿಸಿದರೆ ಅಲ್ಲಿ ಅವರ ಸಿದ್ಧಾಂತಕ್ಕೆ, ಅಹಂಕಾರಕ್ಕೆ, ಮತ್ಸರಕ್ಕೆ ಮತ್ತು "ವಿಮರ್ಶೆ"ಗೆ ಒಳ್ಳೆಯ ಮದ್ದು ಇದೆ!

ಇದೀಗ ಮನಶ್ಶಾಸ್ತ್ರದ ಬಗ್ಗೆ ಹೇಳುವೆನು; ಕೇಳಿರಿ, ಅದನ್ನಾ ಓದಿರಿ! ಅದರೊಳಗಿನ ವಿಷಯವನ್ನು ಕಲಿತಾಗಿ ಆಕರ್ಷಕವಾಗಿ ಪ್ರಕಟವಾದ ಹಿಂದು ಪುಸ್ತಕವನ್ನು ಹಿಡಿದುಕೊಂಡು ಅದರಲ್ಲಿರುವ "ತಪ್ಪು"ಗಳ ಬೇಟೆಗೆ ಹೊರಡುವ "ವಿಮರ್ಶಕ"ರು ಬಹುಶಃ ಹಿಂ

ದು ಬಗೆಯ ನಪುಂಸಕರಿಂದ ಮನುಷ್ಯತ್ವವು ಹೇಳುತ್ತದೆ. ಅದು ಹೇಗೆ? ಕೇಳಿರಿ. ನಪುಂಸಕನಿಗೆ ಪ್ರಾಂತೀಯ ಸ್ವತ್ವವಿಲ್ಲ; ಸ್ವಾಭಿಮಾನವೂ ಇಲ್ಲ. ಅಂಥ ನಪುಂಸಕನು ಏನು ಮಾಡುತ್ತಿರುವನೆಂದು ಗೊತ್ತೆ? ನಾನು ಹಿಂದೆ ಚಂದ್ರ, ರವಿಚಕ್ರ, ಮಂಜುಳ ಎಂಬಿತ್ಯಾದಿ "ಪ್ರಜ್ಞಾ ನಪುಂಸಕರ" ಬಗೆ ಹೇಳಿದ್ದೇನೆ. ಇತರರು ಏನೇನು ತಪ್ಪು ಮಾಡುತ್ತಾರೋ ಅದನ್ನೆಲ್ಲ ಎತ್ತಿ ಇತರರಿಗೆ ಹೇಳುತ್ತಾ, ತಮ್ಮ ನಪುಂಸಕತೆಯ ಬಾಯಿಬಡಿಯನ್ನು ಗಂಭೀರವಾಗಿಸಿಕೊಳ್ಳಲು ಯತ್ನಿಸುವವರು. ಹಲವು ನಿಸ್ಸಹಾಯಕ ಜನರ "ತಪ್ಪು"ಗಳನ್ನು ಹುಡುಕುವ ಕಾತರತೆಯುಳ್ಳ ಅಂಥ ನಪುಂಸಕರು ಬಹು ಅಪಾಯಕಾರಿಯಾದ ಬೇಕ್ಷೆಗಳಲ್ಲಿ ಮಗ್ನರಾಗಿರುತ್ತಾರೆಂಬುದನ್ನು ಹಲವರು ಕಂಡು ತಿಳಿದುದೇ ಆಗಿದೆ! ಹಾಗೆ ಜನರನ್ನು ಕಾಡಿಸಿ ತಾವು ನಿಸ್ಸೀಮರೆಂದೆನ್ನಿಸಿಕೊಳ್ಳುವವರು ಮತ್ತೊಂದು ಬಗೆಯ ಟೊಳ್ಳೆದೆಯ ದುರ್ದೈವಿಗಳು.

ನಮ್ಮ ಶ್ರದ್ಧ್ಯಾಹೀನ ವಿಮರ್ಶಕರೂ ಇದೇ ಬಗೆ! ನಾನು ತಿಳಿದಂತೆ ಸುಮಾರು 1920 ರಿಂದೀಚಿನ ಹಲವು ವಿಮರ್ಶಕರೂ ಅದೇ ಬಗೆ; ಕೋವಿ ಹಿಡಿದು ದುಷ್ಟಮೃಗಗಳ ಬೇಟೆಯಾಡುವವರಲ್ಲ, ಬದಲಾಗಿ ಲೇಖನಿ ಹಿಡಿದುಕೊಂಡು ಇತರರ ಕೃತಿಗಳಲ್ಲಿರುವ "ತಪ್ಪು"ಗಳ ಬೇಟೆಯಾಡುತ್ತಾ ವಿಹರಿಸುವವರು. ಆದರೆ ಅಂಥವರಿಂದ ಉತ್ತಮ ಸಾಹಿತ್ಯದ ನಿರ್ಮಾಣವಂತೂ ಆದುದ್ದೇ ಇಲ್ಲ. ಅದು ಸಹ ಅವರಿಗೇನೇ ಗೊತ್ತಿದೆ!

ಹೀಗೆ ನಮ್ಮ "ತಪ್ಪು"ಗಳ ಬೇಟೆಯ ಬಾಧೆಗೆ ಒಳಗಾದ ಇಂದಿನ ಮತ್ತು ಹಿಂದಿನ ಬಹುತೇಕ ಎಲ್ಲ ಪ್ರಸಿದ್ಧ ಸಾಹಿತಿಗಳು ಇದರ ಬಗ್ಗೆ ಏನನ್ನೂ ಹೇಳದೆ ಮೌನದಿಂದಲೇ, ಇತರರ ಮತ್ಸರದ ದ್ರೋಹಕಾರಕ ನಡೆಗಳನ್ನು ಒಳಗೆ ನುಂಗಿಕೊಂಡರೆಂದು ತಿಳಿಯಬೇಕು. ಹೀಗೂ ನಾನೊಬ್ಬ ವಿಚಿತ್ರ "ಪ್ರಾಣಿ"! ನಾನು ಹೇಳಬೇಕಾದ್ದನ್ನು ನನ್ನ ಮತ್ತು ನನ್ನ ಹಿರಿಯರ ಸಾಹಿತಿಗಳ ಹಿತದೃಷ್ಟಿಯಿಂದ ಇಲ್ಲಿ ಇದನ್ನೆಲ್ಲ ಹೇಳುತ್ತಿದ್ದೇನೆ.

ನಮ್ಮ ವೈಜ್ಞಾನಿಕ, ಕಲಾತ್ಮಕ, ಸಾಂಸ್ಕೃತಿಕ, ಧಾರ್ಮಿಕ ವಿಚಾರಗಳೆಲ್ಲದರ ಮೂಲಪುರುಷರು ಇಂದಿನ ಬರಹಗಾರ ಮಾದರಿಯ ಜನವಲ್ಲ! ಅವರಿಗೆ ನಾವು ಹೇಳಿಕೊಳ್ಳುವ "ವಿದ್ಯೆ"ಯೇನೂ ಇಲ್ಲ. ಅವರೆಲ್ಲ ತಪಸ್ಸುಗಳು, ತಮ್ಮ ತಪೋಬಲ, ಜ್ಞಾನಬಲದಿಂದ ಇಂದಿನ ವೈಜ್ಞಾನಿಕ ಸಾಧನೆಗಳನ್ನೂ ಹಿಂದಿನ ಕಾಲದ ಬೃಹತ್ ಕೃತಿ ಶಾಸ್ತ್ರಗ್ರಂಥಗಳಲ್ಲಿ ಏನನ್ನು ನಿರ್ಮಿಸಿದರು, ಇಂದು ವಿಶ್ವವಿದ್ಯಾಲಯಗಳಲ್ಲಿರುವ ಜನ ಮಾಡುವುದೇನು? ಹಾಗಾದ-ಆ ಜನ ನಮ್ಮ ಜೀವಾಳ

ಸಾಹಸದಿಂದ ಏನೇನು ಸಾಧಿಸಬಹುದೋ ಅದರ ಮೇಲೆ ತಿಳಿ! ವ್ಯಾಖ್ಯಾನ! ಆಖ್ಯಾನ ಇತ್ಯಾದಿ! ಹಾಗಾಗಿ ಇವರು ತಜ್ಞರು; ಅವರಿಲ್ಲ ಅಜ್ಞರು! ಹೀಗೆ ಇಂದಿನ ಜನದ, ಇಂದಿನ ತಜ್ಞರ ಜೀವನೋಪಾಯ! ಇಂಥ ನಿಸ್ಸತ್ವ ನಿಸ್ಸಾರ ಜೀವನಕ್ಕೆ ಕಳೆಗಟ್ಟುತ್ತೋ ಎಂಬಂತೆ ಅವರಿಗೆಲ್ಲ ಬಿರುದು ಸತ್ಕೃತಿಗಳು, ಆಡಂಬರದ ಸಮಾರಂಭಗಳು, ವಿಶ್ವವಿದ್ಯಾಲಯಗಳು. ಹಾಗಂದ ಮೇಲೆ ಇನ್ನೇಂತು?

ಇಂಥಾ ಬಗೆಯ ಸಾಹಿತಿಗಳು ಹೆಚ್ಚಿದಾಗ ನಮ್ಮ ಸಾಹಿತ್ಯವೆಲ್ಲ ಗ್ರಂಥಪ್ರಕಾಶಕರ ವ್ಯಾಪಾರ-ವಸ್ತುವಾಗುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ ಹಿಂದೆಯೇ ಹೀಗಾಗಿದೆ. ನಮ್ಮ ದೇಶದಲ್ಲಿ ನನಗೆ ಗೊತ್ತಿದ್ದ ಹಾಗೆ ಕಳೆದ ಐವತ್ತು ವರ್ಷಗಳಿಂದ ಹೀಗಾಗುತ್ತಾ ಇದೆ. ದೊಡ್ಡ ನಗರಗಳಲ್ಲಿ ಇಂಥವರ ಪ್ರಕಾಶಕರ ಅವ್ಯವಹಾರದ ವ್ಯಾಪಾರವೆಂದರೆ ಸತ್ಯ, ಸೌಂದರ್ಯ, ಸಾಹಸಗಳ ಕೊಲೆಯೆಂದರೂ ಸರಿ! ಹಾಗೆ ವ್ಯಾಪಾರವೆಂದಾದ ಮೇಲೆ ಅದಕ್ಕೇನೂ ನೀತಿ ನಿಯಮಗಳೇನೂ ಇರಬೇಕಿಲ್ಲವಷ್ಟೆ!

ನನಗೆ ತಿಳಿದಂತೆ ಕಂಡುಬಂದುದನ್ನು ಇಲ್ಲಿ ನಿಷ್ಠೆಯಿಂದ ಹೇಳುತ್ತಿದ್ದೇನೆ. ಅದು ಇತರರ ಪ್ರಶಂಸೆಗಲ್ಲ; ಚಿಂತನೆಗೆ ಮಾತ್ರ! ನಮ್ಮ ರಾಜಕೀಯ ಕ್ಷೇತ್ರಗಳಲ್ಲಿ ಹೇಗೋ ಹಾಗೆಯೇ ಸಾಹಿತ್ಯ ಕ್ಷೇತ್ರಗಳಲ್ಲಿ ಅಲ್ಲಲ್ಲಿ ಕೆಲವು ಪ್ರಚಾರಿಗಳು ಇದ್ದೇ ಇದ್ದಾರೆ. ಆದರೆ ಅವರು ಯಾರಾರು ಎಂಬುದಾಗಿ ದೂರದಲ್ಲಿರುವ ನನಗೆ ಸ್ಪಷ್ಟವಾಗಿ ತಿಳಿಯುವುದು ಕಷ್ಟ! ನನ್ನ ಈ ಹಿನ್ನುಡಿ-ಮುನ್ನುಡಿಗಳ ಬಗೆಯೂ ಕೆಲವರು ಕಿರಿಚಿಕೊಳ್ಳಬಹುದು. ಆದರೇನು? ಸತ್ಯ ಹಾಗೂ ಸತ್ತ್ವ ವಿಚಾರಗಳನ್ನು ಕೆಲವು ಸಮಾಜವಾದೀ ರಾಷ್ಟ್ರಗಳಂತೆ ಮರೆಸಿ ಹಚ್ಚಿ ಅಳಿಸಲಿಕ್ಕೆ ಎಷ್ಟು ಪ್ರಯತ್ನಿಸಿದರೂ ಕಡೆಗಂತು ಸತ್ಯವು ಸತ್ತ್ವಯುತವಾಗಿ ತೋರದೆ ಇರದು. ಸಮಾಜ ಧರ್ಮವನ್ನೂ ಸಾಹಿತ್ಯವನ್ನೂ ಕಲೆಯನ್ನೂ ಹದ್ದುಮೀರಿದ ದ್ವೇಷದಿಂದ ಅಪಪ್ರಚಾರದಿಂದ ಕೆಡಿಸಲು ಯತ್ನಿಸುವವರು ಎಂದೂ ಜಯಪ್ರದರಾಗರಲ್ಲ; ಆಗುವ ಸಂಭವವೂ ಇಲ್ಲ; ಕೊನೆವರೆಗೆ ಕಡೆಗಂತು ಉಳಿಯುವುದು ಸತ್ಯ!

ಇತಿಹಾಸವು ನನಗೆ ಹಿಂದು ಬಗೆಯ ವೇದಾಂತ. ಲೋಕವನ್ನು ನಡೆಸುವವರು ಹಿಂದಿನ ಕಾಲದ ಚರಿತ್ರೆಯಿಂದ ಹಲವು ವಿಷಯಗಳನ್ನು ಕಲಿಯಬಹುದು. ಆದರೂ ಅದಾರೂ ಏನನ್ನೂ ಕಲಿಯುತ್ತಿಲ್ಲವೆಂಬುದನ್ನು ಇಂದಿನ ಪ್ರಪಂಚದ ಪರಿಸ್ಥಿತಿಯಿಂದ ತಿಳಿಯಬಹುದು. ರಾಜಕೀಯ ಕಟುಕರು,

ರಕ್ತ ರಾಕ್ಷಸರು ಸಮಾಜ ಘಾತುಕರೂ ಕಾಲದಿಂದ ಕಾಲಕ್ಕೆ ಇದ್ದೇ ಇದ್ದರು; ಇಂದೂ ಇದ್ದಾರೆ; ಉಪಾಯವಿಲ್ಲ. ಅಂಥ ಹಲವರು ನಮ್ಮ ಪ್ರತಿಭಾವಂತ, ಧಾರ್ಮಿಕ, ಕಲಾತ್ಮಕ ಸೌಂದರ್ಯವನ್ನೇ ಕೊಲೆ ಕೊಳ್ಳೆಗಾಗಿ ಸದಾ ಪ್ರಯತ್ನಿಸುವರಾದರೂ ಕೊನೆಗಂತೂ ಆ ಕೊಳ್ಳದ ತಳಕ್ಕೆ ಇಳಿಯುತ್ತೇ ಹೋಗುತ್ತ. ಸತ್ಯವೇ ಶುಚಿ, ಸತ್ಯವೇ ಬೆಳಕು, ಸತ್ಯವೇ ದೇವರು ಎಂದಾದರೆ ಕಡೆಗಂತು ಉಳಿಯುವುದು ಸತ್ಯ!

ನನ್ನೀ ಕೃತಿಯು ಇದರ ಮೊದಲ ಮುದ್ರಣವಾಗಿ ಹದಿನೆಂಟು ವರ್ಷಗಳ ನಂತರ ಎರಡು ಭಾಗವಾಗಿ ಪ್ರಕಟವಾಗುತ್ತಿದೆ. ಇದು ಮೊದಲ ಭಾಗ. ಪಾಶ್ಚಾತ್ಯ ವಿದ್ವಾಂಸರು ಭಾರತೀಯ ಸಾಹಿತ್ಯ ಸಂಸ್ಕೃತಿಗಳ ಪುನರುದ್ಧಾರದ ಬಗ್ಗೆ ಮಾಡಿದ ಅಮೋಘ ಸೇವೆಯ ಸಿಂಹಾವಲೋಕನವಷ್ಟೇ ಇಲ್ಲಿ ಇದೆ. ಇದರ ಮುಂದಿನ ಭಾಗದಲ್ಲಿ ಅವರು ಕರ್ನಾಟಕಕ್ಕೆ ಸಲ್ಲಿಸಿದ ಸೇವೆಯನ್ನು ಕುರಿತಾಗಿ ಹೇಳಲಾಗುವುದು.

ಆದರೆ ಈ ಹದಿನೆಂಟು ವರ್ಷಗಳ ದೀರ್ಘ ಅವಧಿಯಲ್ಲಿ ಹಿಂದಿನ ಆವೃತ್ತಿಯ ಪ್ರತಿಗಳು ಬೇಕೆಂದು ಹಲವು ಸಾಹಿತಿ ಮಿತ್ರರೂ ಪುಸ್ತಕ ವ್ಯಾಪಾರಿಗಳೂ ನನಗೆ ಆಗಿಂದಾಗ್ಗೆ ತಿಳಿಸಿದರಾದರೂ ನಾನು ನಿಸ್ಸಹಾಯಕನಾಗಿದ್ದೆನು. ಇದರ ಪುನರ್ಮುದ್ರಣಕ್ಕೆ ನಮ್ಮ ಸಾಹಿತ್ಯ ಸಂಸ್ಥೆಗಳು ವಿಶ್ವವಿದ್ಯಾಲಯಗಳು "ತಜ್ಞ"ರಾರೂ ಕೈಕೊಳ್ಳಲಿಲ್ಲ. ಅವರೆಲ್ಲ ಬಹುಶಃ ಸಾಕಷ್ಟು ಅವರವರ ಬರೆಹದ ವ್ಯಾಪಾರದಲ್ಲಿ ಅನ್ಯೋನ್ಯ ನಿರತರಾಗಿ ಕವಿಮಾಗ ಎಲ್ಲೋ ವಿದೇಶಗಳಲ್ಲಿರುವವನ "ತಪ್ಪು" ಹೊತ್ತಿಗೆಗಳ ಭಾರ ತಾವೇಕೆ ಹೊರಬೇಕು ಎಂದೆನ್ನುತ್ತಾ ತಮ್ಮ ವ್ಯವಹಾರದಲ್ಲಿ ಮಗ್ನರಾಗಿರುವರೆಂದು ಮಿತ್ರರು ನನಗೆ ತಿಳಿಸಿದ್ದಾರೆ. ಇದೆಲ್ಲ ಬಹುಕಂದೆ! ಇಂದಿಗೂ ಪರಿಸ್ಥಿತಿ ಅದೇ ರೀತಿಯಿಂದೆನ್ನಬಹುದು.

ನಾನು ಈ ಮುನ್ನುಡಿ-ಹಿನ್ನುಡಿಗಳಲ್ಲಿ ಹೇಳಿದ ವಿಚಾರಗಳು ಲೋಕಸತ್ಯವಾಗಿವೆ. ನಾನು ಹಿಂದೆ ಹೆಸರಿಸಿದ ಮತ್ತು ಹೆಸರಿಸದ ಕರ್ನಾಟಕದ ಅದೆಷ್ಟೋ ಎಲ್ಲೆಡೆಯೂ ಇರುವ ಪ್ರಸಿದ್ಧ ಸಾಹಿತಿಗಳು ನಾನಂದುದಕ್ಕೆ ಒಪ್ಪುವರೆಂದು ನನಗೆ ಗೊತ್ತಿದೆ. ಅವರು ಒಪ್ಪಲೇಬೇಕು. ಬಹುಶಃ ಅವರೆಲ್ಲ ತಮಗೆ ಇಂಥ ಕಹಿ ಅನುಭವವು ದುರಾಗ್ರಹೀ ಲೇಖಕರಿಂದ ಆಗಿಲ್ಲವೆಂದು ಇಂದಿನ ಜನದೆದುರಿಗೆ ನಟಿಸಿದರೆ ಅಂಥಾ ನಟರು ಯಾರಾರು ಎಂದು ತಿಳಿಯುವುದೂ ದುಸ್ತರವಿದೆ. ಏಕೆಂದರೆ ಕವಿಗಳೂ ಕಟುಕರೂ ಎಲ್ಲೆಲ್ಲೂ ಇದ್ದಾರೆ. ಇಲ್ಲವೆಂದು ಹೇಳುವವರಿದ್ದಾರೆಯೆ? ಇರಬಹುದು! ಕೇಳಿರಿ

ಜನ "ಕವಿಗೆ ಕವಿ ಮುನಿವಂ" ಎಂದು ಹೇಳಿದನು. ಆದರೆ ನಾನು "ಕವಿಗೆ ಕವಿ ಪ್ರೋತ್ಸಾಹವಂ ಬಗೆವಂ," ಎಂದೆನ್ನುವೆನು. ಇದು ಸರಿಯೋ ನಿಜವಾದುದೋ ಏನೋ! ಮುಂದಿನ ಜನಾಂಗ ಈ ವಿಚಾರ ನೋಡಿಕೊಳ್ಳುವುದು.

ನಾನು ಇದನ್ನೆಲ್ಲ ವಿದೇಶಗಳಲ್ಲಿದ್ದು ಹೇಳಬೇಕಾಗಿ ಬಂದುದು, ಹಾಗನ್ನಲಿಕ್ಕೆ ಇಲ್ಲಿರುವ ನಮ್ಮ ತಜ್ಞರ ತಂಡ ನನಗೆ ಅವಕಾಶವಿತ್ತುದು, ಅವರು ತಾವೆಲ್ಲ ಬ್ರಹ್ಮಜ್ಞಾನಿಗಳೆಂದು ನಮ್ಮಂಥಾ ಅಲ್ಪಮತಿಗಳಿಗೆ ತೋರಿಸಿಕೊಳ್ಳುವುದು, ಸಾಹಿತ್ಯದ ಹಾಗೂ ವೇದಾಂತ ಹೆಸರಿನಲ್ಲೂ ವ್ಯಾಪಾರ, ಜೀವನೋಪಾಯವನ್ನು ನಡೆಸುವುದು ತೀರಾ ನಮ್ಮ ದುರ್ದೈವ! ನಿಜಕ್ಕೂ ನಾನು ಬೇಸರಗೊಂಡಿದ್ದೇನೆ! ಉಪಾಯವಿಲ್ಲ!

ನನ್ನ ಈ ಎಲ್ಲ ಹೇಳಿಕೆಗೆ ಹಿನ್ನೆಲೆಯಾಗಿ ಕಳೆದ ಇರುವತ್ತು ವರ್ಷಗಳಿಂದೀಚೆಗೆ ನಮ್ಮ ಇಂದಿನ ಹಿರಿಯ ವರ್ಗದ ಸಾಹಿತಿಗಳಿಗೆ ಆ ವರ್ಗಕ್ಕೆ ಸೇರಲು ಅನರ್ಹರಾದ ನಕಲೀ ಸಾಹಿತಿಗಳು ವಿವೇಕಶೂನ್ಯತೆಯಿಂದೋ ಹಿರಿಮಾತ್ಸರ್ಯತೆಯಿಂದೋ ಹೇಳುತ್ತಾ ಕೊಡುತ್ತಿದ್ದ ಕಿರುಕುಳವೆಲ್ಲವನ್ನೂ ಸಾಕಷ್ಟು ಬಲ್ಲೆ. ಈಗ ಮೂವತ್ತು ವರ್ಷಕಾಲ ನಾನು ಹೊರಗಿದ್ದರೂ ಅದಕ್ಕಿಂತ ಹಿಂದಿನ ಮೂವತ್ತು ವರ್ಷಕಾಲ ನಾನು ಇಲ್ಲಿಯೇ ಬದುಕಿದ್ದೆ!

ಪ್ರಜಾಪ್ರಭುತ್ವ ಪ್ರಭುತ್ವ ಇತರ ರಾಜನೀತಿಗಳಿಗಿಂತ ಒಳ್ಳೆಯದಾದರೂ ಅದರಲ್ಲೂ ಹಲವು ಅನಾಚಾರಗಳು ದಿನ ನಿತ್ಯ ನಡೆಯುತ್ತವೆಂಬುದನು ನಾವೆಲ್ಲ ತಿಳಿದ ವಿಚಾರವಾಗಿದೆ. ಆಳುವ ಜನ ಮತ್ತು ಆಳಲ್ಪಡುವ ಜನದ ಮಧ್ಯೆ ಮೂರನೇ ಬಗೆಯ ಜನವಿದೆ. ಅವರೇ bureaucrats ಎಂಬುವರು. ಇವರಿಗೆ ಒಳ್ಳೆಯದನ್ನೆಸಗಲು ಪ್ರಜಾಪ್ರಭುತ್ವದಲ್ಲಿ ಹೆಚ್ಚೇನೂ ಸಾಧ್ಯವಿಲ್ಲ. ಆದರೆ ಜನಕ್ಕೆ ಸಾಕಷ್ಟು ತೊಂದರೆಯನ್ನು ಕೊಡಬಲ್ಲರು. ಮೊತ್ತ ವರ್ಗದ ಆ ನೌಕರಿಗಳು ಸರಕಾರದ ಕಚೇರಿಗಳಲ್ಲಿರುತ್ತ ಆಚೆ ಈಚೆ ಬರುತ್ತಾ ಹೋಗುತ್ತಾ ಇರುವ ಕಾಗದ ಪತ್ರಗಳನ್ನು ಓದಿ, ನೋಡಿ, ಜೋಡಿಸಿ ಇಡುವ ನಿಶಾನೆ, ಅತ್ತಿತ್ತ ಕಳುಹಿಸುವ ಅಂಚೆ ಕೆಲಸವೇ ಅವರಿಗೆ ಹೆಚ್ಚು! ನಮ್ಮ ಕಾಲಪತಿಗಳು, ಪ್ರಾಣಪತಿಗಳು, ಗಜಪತಿಗಳು ವಿಷಯವಾಗಿ ಹಿಂದೆಯೇ ಹೇಳಿದೆನಷ್ಟೆ!

ಹಾಗಿದ್ದರೂ ಅವರ ಹೆಮ್ಮೆ ಬಡಾಯಿಗೇನೂ ಇತಿಮಿತಿಯಿಲ್ಲ. ಅವರ ಸುತ್ತ ಆಚೀಚೆ ಹತ್ತಿ ಜನ, ಜವಾನರು, ಪೇದೆಗಳು ಇತ್ಯಾದಿ! ಹಿಂದಿರುಗು ಹಿಂಬಾಲಕರ ಮತ್ತು ಬರೆಯುತ್ತಿದ್ದರೂ ಅವರಕ್ಕೆ ಓದುವುದಿಲ್ಲ, ಅದಕ್ಕೆಲ್ಲ ಅಲ್ಲೆ ಸಹಾಯಕರುಗಳು ಸಹಾ ಇದ್ದಾರೆ. ಅವರಿಗೆಲ್ಲ ಕೆಲಸ ಬೇಕೆ?

ಕೆಲವು ವರ್ಷಗಳಿಗೆ ಹಿಂದೆ ದೊಡ್ಡ ಒಂದು ಖಚೇರಿಯೊಳಗೆ ನುಗ್ಗಿದೆನು. ಅಲ್ಲಿ ಹತ್ತಿರವುದು, ಕುರ್ಚಿಗಳು, ಎಲ್ಲಿ ಜಂಗನರು ಹಾಯಾಗಿ ಮಾತುಕತೆಯಾಡುತ್ತಾ ಕೆಲಸ ಕೆಲಸದಲ್ಲಿ ನಿರತರಾಗಿದ್ದರು. ಯಾರಿವರು? ಅವರಲ್ಲಿ ಕೆಲವರು ಟೈಪಿಸ್ಟುಗಳು ಮತ್ತು ಅಲ್ಲಲ್ಲಿ ಇದ್ದ ಕುರ್ಚಿಗಳಲ್ಲಿ ಕೂರುವವರು. ಅವರೇಕೆ ಕೆಲಸ ಕೆಲಸದಲ್ಲಿದ್ದಾರೆ? ಅವರಿಗೆ ಟೈಪು ಮಾಡಲು ಪತ್ರಗಳೇನೂ ಆ ದಿನ ಬಹುಶಃ ಇರಲಿಲ್ಲ. ಏನಾದರೊಂದು ನಾಲ್ಕು ಗೆರೆಯ ಪತ್ರ ಬಂದಾಗ ಅವರಲ್ಲಿಬ್ಬರು ತಟಕ್ಕನೆ ಎದ್ದು ಒಂದೆರಡು ನಿಮಿಷ ಟಕಟಕ ಮಾಡಿ ಅತ್ತ ಕೊಟ್ಟರೆ ಆ ದಿನದ ರೂ. ೨೦/= ರ ಕೆಲಸ ಆದ ಹಾಗೆ ಆಯ್ತು.

ಒಮ್ಮೆ ನನಗೊಂದು ದೊಡ್ಡ ಸಮಸ್ಯೆಯುತ್ತು. ಅದರ ಪರಿಹಾರದ ಬಗೆ ಮಾತಾಡಲು ವಿಧಾನ ಸೌಧದಲ್ಲಿರುವ ಒಬ್ಬ ನೌಕರನ ಮಾತಾಡಿಸಲೆಂದು ಹೋದೆನು. ಅವನ ಕೊಠಡಿಯೂ ವಿಶಾಲವಾಗಿದೆ. ಅವನ ಸುತ್ತಾ ಹಲಜನ ಅತ್ತ ಇತ್ತಯಿಂದ ಹೋಗುತ್ತಿದ್ದರು. ಅವನಿಗೆ ಸೇರಿದ ಟೈಪಿಸ್ಟು, ಕಾಪಿಸ್ಟು, ದಾಖಲೆಯವರೆಲ್ಲ ಪಕ್ಕದ ಕೋಣೆಗಳಲ್ಲಿದ್ದರು. ನಾನು ಒಳಹೊಕ್ಕು ಆ ವ್ಯಕ್ತಿಗೆ ಕೈಮುಗಿದು ಒಂದೆಡೆ ಕುಳಿತೆನು. ಅವನಾದರೋ ಕೆಲ್ಲರಿಯುತ್ತಾ ಮಾತಾಡಿಸಿದನು. ಅಷ್ಟರಲ್ಲಿ ಅವನು ಅಲ್ಲಿ ಕುಳಿತು ಸೊನ್ನೆ ಓದಿ ದಣಿದವನೆಂದು ಅವನಿಗೆ ಒಂದು ಬಟ್ಟಲು ಕಾಫಿ ಬಂತು. ನಾನು ನನ್ನ ಸಮಸ್ಯೆಯನ್ನು ಕುರಿತಾಗಿ ಅವನಿಗೆ ಹೇಳಲಾರಂಭಿಸಿ ತೊಡಗಿದೆನು. ಅವನ ಒಂದು ಕಣ್ಣು ನನ್ನೆಡೆಗೆ ಇತ್ತು; ಅವನ ಇನ್ನೊಂದು ಕಣ್ಣು ಆಚೆ ಎದುರಿನ ಗೋಡೆಯ ಪಕ್ಕದಲ್ಲಿ ಹರಡುತ್ತಿದ್ದ ಟೆಲಿವಿಷನ್ ಮೇಲಿಯುತ್ತು. ಅವನೂ ಒಬ್ಬ ಸಾಹೇಬನೆಂದು, ಅಂಥ ಸಾಹೇಬರಿಗೆಲ್ಲ ಖಚೇರಿಯೊಳಗೇ ಟೆಲಿವಿಷನ್ನು!! ಹಾಗಿದೆ? ನಮ್ಮ ದೇಶವೆಷ್ಟು ಪ್ರಬಲವಾಗಿದೆ! ಹೇಗೂ ಅವನಿಂದ ನನ್ನ ತೊಂದರೆ ನಿವಾರಣೆಯಾಗುವಂತಿಲ್ಲವೆಂದೇನೋ ಅವನಿಗೆ ತಿಳಿಸೋ ತಿಳಿಯದೆಯೇ ಮೌನವಾಗಿ ನಗುತ್ತಾ ಎದ್ದು ಹೊರಬಂದೆನು.

ಹೀಗೆ ನಡೆಸುವುದರ ಸರಕಾರಕ್ಕೆ ಸ್ವತಃ ನೀತಿಗಟ್ಟೇನೂ ಇರಬೇಕಿಲ್ಲ. ಪ್ರತಿ ತಿಂಗಳು ತಮ್ಮ ಜೇಬುಗಳಿಗೆ ಒಂದಷ್ಟು ಹಣ ತುಂಬುವುದೇ ಬಾಳಿನ ಗುಟ್ಟು ಎಂಬುದೇ ಅವರೆಲ್ಲರ ವೇದಾಂತ! ಅಂತಹ ವೇದಾಂತದಲ್ಲಿ ನಮ್ಮ ದೇಶ ಸಮೃದ್ಧವಾದುದು. ದೇಶವಿದೇಶಗಳಿಗೆಲ್ಲ ನಮ್ಮ ವೇದಾಂತ ರಫ್ತಾಗುತ್ತಿದೆ; ಹಾಗಾಗಿ ಹಲವರ ಜೀವನ ಅಲ್ಲೆಲ್ಲ ಆ ರೀತಿ ನಡೆಯುತ್ತದೆ.

ನಮ್ಮ ಹಲವು ನಿಷ್ಠಾವಂತ ಸಾಹಿತಿಗಳು ಇತರ ನವ್ಯ ಸಾಹಿತಿಗಳ ದೆಸೆಯಿಂದಾಗಿ ತುಂಬಾ ತೊಂದರೆಗೊಳಗಾಗಿರುವರೆಂದು ನನಗೆ ಹಿಂದೆಯೇ ಗೊತ್ತಿದೆ. ಆದರೆ ಅವರೆಲ್ಲರಿಗಿಂತಲೂ ನಾನು ತುಂಬಾ ಕಷ್ಟಕ್ಕೆ ನಷ್ಟಕ್ಕೆ ಒಳಗಾಗಿದ್ದೇನೆಂದು ನನಗನ್ನಿಸುತ್ತದೆ. ಕರ್ನಾಟಕದ ಹೊರಗೆ ನನ್ನ ಪಾಲಿನ ಸುಮಾರು ಮೂವತ್ತು ವರ್ಷಗಳೇ ಆಗಿ ಹೋದುವಲ್ಲ. ಹಾಗೆ ವಿದೇಶಗಳಲ್ಲಿದ್ದು ಬರೆಯುವುದು, ಬರೆದುದನ್ನು ಪ್ರಕಟಿಸುವುದು ಇತ್ಯಾದಿ ನನಗಾಗುವ ತೊಂದರೆಗಳಲ್ಲಿ ಒಂದು ಮಾತ್ರ!

ಆದರೆ ನನ್ನ ನಿಸ್ಸಹಾಯಕ ಪರಿಸ್ಥಿತಿಗೆ ನಾನು ಹೆಮ್ಮೆಗೊಂಡಿದ್ದೇನಲ್ಲದೆ ಅಳುತ್ತಿಲ್ಲ; ಆ ಕಾರಣದಿಂದ ಇತರರನ್ನು ಹಳಿಯುವುದೂ ಇಲ್ಲ. ನನ್ನ ತಾಪತ್ರಯಕ್ಕೆ ಮೂಲಕಾರಣವೇನೆಂದು ನನ್ನ ಗುರುಗಳು ಹೇಳಿದರು. ನನ್ನ ಹರಿತವಾದ, ನಿದಾಕ್ಷಿಣ್ಯದ, ನಿರ್ವಂಚನೆಯ ಮತ್ತು ನಿಷ್ಪಕ್ಷಪಾತವಾದ ಲೇಖನಿ! ಆ ಬದಲಲ್ಲಿ ಮೊಂಡಾದ ಲೇಖನಿಯು ನನಗೆ ಯಾವ ಅಂಗಡಿಯಲ್ಲೂ ದೊರಕದಿರುವುದೇ ನನ್ನ ಕಷ್ಟಕ್ಕೆ, ನಷ್ಟಕ್ಕೆ ಕಾರಣವಿರಬಹುದು.

ಇರಲಿ, ಅದರಿಂದ ನಾನು ಸಂತೃಪ್ತಿಗೊಂಡಿದ್ದೇನೆ. ಒಬ್ಬ ಸಾಹಿತಿಗೆ ತಾನು ಪಡಬಾರದ ಕಷ್ಟವನ್ನು ಪಡುವ ಅನುಭವ ಬೇಕು. ಹಾಗಾದಾಗ ಮಾತ್ರ ಅವನ ಬರೆಹ ಸತ್ವಪೂರ್ಣವಾಗಿರುವುದೆಂದು ಬಲ್ಲವರು ಹೇಳುತ್ತಾರೆ. ನನ್ನ ಬರೆಹ, ನನ್ನ ಮಾತು, ನನ್ನ ಹಾಡು ಇತ್ಯಾದಿ ನಿಸ್ಸತ್ವ, ನಿಸ್ಸಾರವೇ ಇರಬಹುದು. ಆದರೂ ಅವು ಜನವನ್ನು ಕೆರಳಿಸಿದೆ. ಕೆಲವರನ್ನು ದಂಗುಬಡಿಸಿದೆ. ಕೆಲವರು ನನ್ನ ನಿದಾಕ್ಷಿಣ್ಯದ ನಿರ್ವಂಚನೆಯ ನಿಲುವನ್ನು ಕಂಡಿದ್ದಾರೆ. ನನಗೆ ಅದೇ ಸಂತೋಷ!

ನನ್ನ ಆ ನಿಲುವಿನಿಂದ ನಾನು ಯಾರೊಬ್ಬನನ್ನೂ ತೃಪ್ತಿಪಡಿಸಲಿಕ್ಕೆಂದು ಬರೆದುದ್ದೇ ಇಲ್ಲ. ಒಬ್ಬನು ನನ್ನ ಒಂದು ಗ್ರಂಥದ ಪ್ರಕಟನೆಗೆ ರೂ. ೨೦,೦೦೦ ಸಹಾಯಧನವೀಯಲು ಮುಂದೆ ಬಂದನು, ನಾನಾದರೋ ಅದನ್ನು ತಿರಸ್ಕರಿಸಿದೆನು, ಕೆಲವು ಪತ್ರಿಕಾ ಪ್ರಕಾಶಕರು ಅವರಿಗೆ ಬೇಕಾದಂತೆ ಬರೆಯಬೇಕೆಂದು ಸೂಚಿಸಿದರು; ನಾನು ಅದಕ್ಕೊಪ್ಪುವಂತಿರಲಿಲ್ಲ. ಹೀಗೆ ಇನ್ನೆಷ್ಟೋ ಪ್ರಸಂಗ ಹಿಂದೆಯೇ ನಡೆದು ಹೋಗಿದೆ. ಇಂದೂ ಬಹುಮಟ್ಟಿಗೆ ಅದೇ ಪರಿಸ್ಥಿತಿ!

ಸತ್ಯ, ಸತ್ವ, ಸತ್ತ್ವ, ಇವುಗಳ ಹಿನ್ನೆಲೆಯಲ್ಲಿ ನಾನು ನನ್ನ ಲೇಖನಿಯನ್ನು ಆಡಿಸಿದ್ದೇನೆ. ಕೆಲವರಿಗೆ ಅದು ಸರಿಯಾಗಿ ಕಂಡಿರಲಿಕ್ಕಿಲ್ಲ. ಆದರೆ ಅಂಥವರನ್ನು ತೃಪ್ತಿಪಡಿಸಲಿಕ್ಕೆಂದು ನಾನು ಏನನ್ನೂ ಬರೆದುದಿಲ್ಲ. ನನಗೆ ಸರಿಯೆಂದು ಕಂಡುದನ್ನು ಹೇಳಿದ್ದೇನೆ, ಬರೆದಿದ್ದೇನೆ ಮತ್ತು ಹಾಡಿದ್ದೇನೆ. ಇದರಿಂದ ನಿಜಕ್ಕೂ ನಾನು ಸಂತೃಪ್ತಿ

ನಾಗಿದ್ದೇನೆ. ಆದರೆ ಅವೆಲ್ಲದರ ಹಿನ್ನೆಲೆಯಲ್ಲಿ ಇತರರ ಆದರ್ಶಪ್ರೇರಿತ ನಿಷ್ಠೆ ಕೃತಿ ಚೌರ್ಯ ಕೃತಿಗಳನ್ನು ಎದುರಿಸಿದ್ದೇನೆ. ಈ ನನ್ನ ಬರಹವೂ ಅದೇ ದಾರಿಯಲ್ಲಿ ಹರಿಯುತ್ತಿರಬಹುದು!

ನನಗೊಬ್ಬ ಅಧ್ಯಾಪಕನಿದ್ದನು; ಪ್ರಾಧ್ಯಾಪಕನೆಂದರೂ ಸರಿ. ಅವನು ಓದದೇ ಇದ್ದ ವಿಷಯದ ಮೇಲೆ ಪಾಠಹೇಳುತ್ತಿದ್ದನು; ಅದು ಬರೀ ಹರಟೆಯೆಂದರೂ ಸರಿ! ಕೆಲವು ದಿನಗಳಲ್ಲಿ ನಾನು ಅವನ ಸಹೋದ್ಯೋಗಿಯಾದೆ. ನಾನು ಅವನೊಡನೆ ಕೆಲವು ವಿಷಯಗಳನ್ನು ಕುರಿತಾಗಿ ಮಾತಾಡುತ್ತಿದ್ದೆನು. ಕಾಲನಂತರ ಅವನು ಅದೇ ವಿಷಯಗಳನ್ನು ಯಾರಿಂದ ಕಲಿತನೆಂಬುದನ್ನು ಮರೆತು ಅನಂತರ ಅವೆಲ್ಲವನ್ನು ನನಗೇನೇ ಹೇಳುತ್ತಿದ್ದನು.

ನಮ್ಮ ಕೆಲವು ವಿಮರ್ಶಕರೂ ಅವರ ಕೃತಿಚೌರ್ಯತೆಯ ಪರಿಶೋಧನೆಗಳೂ ಇದೇ ರೀತಿ. ತೀರಾ ಜೀವನೋಪಾಯಕ್ಕಿರುವ ವ್ಯಾಪಾರವೆಂದಾದ ಮೇಲೆ ಅದರಲ್ಲಿ ನೈತಿಕ ನಿಲುವು ಏನೂ ಇರಬೇಕಿಲ್ಲ. ಇಂಥವರನ್ನು ಬರೀ Career writers in the Universities or out in the backlanes ಎಂಬುದಾಗಿ ಹೇಳುತ್ತಾರೆ.

ನಮ್ಮ "ಸಾಹಿತ್ಯ ಪ್ರೇಮಿಗಳು" ಕೆಲವರು ಪ್ರಾಧ್ಯಾಪಕರಾದಾಕ್ಷಣದಿಂದ ಇಡೀ ಪ್ರಾಧ್ಯಾಪಕ ಸಂತಾನವರೇ ಈಗಿನ ಜನ ವಿಶ್ವವಿದ್ಯಾಲಯಗಳಲ್ಲಿ ಮಾಡುತ್ತಿರುವುದು ಏನೇನು ಎಂದು ತಿಳಿಯದು. ತಮ್ಮ ತಪ್ಪುಗಳನ್ನು ಬಚ್ಚಿಡುವುದು, ಇತರರದನ್ನು ಕಂಡಾಗ ಹಿಗ್ಗಿ ಹಾರಾಡುವುದು; ಅದರ ಪ್ರಚಾರ ಬೇರೆ! ಇದೇ ನಮ್ಮ ಅಧ್ಯಯನ; ಇದೇ ನಮ್ಮ ತಜ್ಞತೆ!

ನಮ್ಮ ಕೆಲವು ಸಾಹಿತ್ಯ ತಜ್ಞರು ಹದಿನೆಂಟು ವರ್ಷಗಳಿಗೆ ಹಿಂದೆ ನನ್ನ ಬರೆಹವನ್ನು ಖಂಡಿಸಿ ಆ ಕ್ರೈಸ್ತ ವಿದ್ವಾಂಸರನ್ನು "ಮಿಷನರಿ, ಮಿಷನರಿ" ಎಂದು ಅವಹೇಳನದ ಬರೆಹಗಳಿಂದ ಜರೆದು, ಅದರನಂತರ ~~ಈಗ~~ "ಆ ಮಿಷನು ಈ ಮಿಷನು, ಮೋಟಾರು ಕಾರು ಮಿಷನು" ಎಂದಿತ್ಯಾದಿಯಾಗಿ ಏನೇನೋ ಬರೆಯುತ್ತಾರೆ. ಇಂಥವರನ್ನು mercenary ಸಾಹಿತಿಗಳೆಂಬುದಾಗಿಯೂ ಹೇಳುತ್ತಾರೆ.

ಭಾರತೀಯ ಸಂಸ್ಕೃತಿ ಮತ್ತು ಸಾಹಿತ್ಯವನ್ನು ಪುನರುಜ್ಜೀವಗೊಳಿಸಿದ ಪಾಶ್ಚಾತ್ಯ ವಿದ್ವಾಂಸರಲ್ಲಿ "ಮಿಷನರಿ"ಗಳ ಸಂಖ್ಯೆ ಅತ್ಯಲ್ಪವೆಂದು ಹಿಂದೆಯೇ ಹೇಳಿದೆನಷ್ಟೆ! ಉದಾಹರಣೆಗಾಗಿ ತೆಲುಗು ಸಾಹಿತ್ಯವನ್ನು ಮೇಲೆತ್ತಲು ಕಾರಣನಾದವರಲ್ಲೊಬ್ಬನಾದ Sir Charles Brown ಇವನ ಬಗ್ಗೆ ಹಿಂದೆ ಹೇಳಿದ್ದೇನೆ. ಮದ್ರಾಸು ಆಧಿಪತ್ಯದಲ್ಲಿ ಒಬ್ಬ ನ್ಯಾಯಾಧೀಶನಾಗಿದ್ದ ಇವನು ತೆಲುಗು ಸಾಹಿತ್ಯದ ಹಿರಿಯ ಕವಿ ವೇಮನನ ಕಾವ್ಯ

ಗ್ರಂಥವನ್ನು ಬೆಳಕಿಗೆ ತಂದನು. ತೆಲುಗು ಪ್ರಾಚೀನ ಗ್ರಂಥಗಳನ್ನೆಲ್ಲ ಆಂಧ್ರದ ಜನಕ್ಕೆ ಪರಿಚಯ ಮಾಡಿದನು. ತೆಲುಗು-ಇಂಗ್ಲಿಷ್, ಮತ್ತು ಇಂಗ್ಲಿಷ್ ತೆಲುಗು ನಿಘಂಟುಗಳನ್ನು ಬೃಹತ್ಪ್ರಮಾಣದಲ್ಲಿ ಬರೆದನು. "When I began these tasks, Telugu literature was dying out; the flames were just glimmering in the socket," ಎಂಬುದಾಗಿ ಹೇಳಿದ Charles Brown ಇವನು ಆಂಧ್ರ ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಆ ಜನವು ಹೆಮ್ಮೆಗೊಳ್ಳುವಂತೆ ಮಾಡಿದ ಸಾಹಿತ್ಯ ರಸಿಕರುಗಳಲ್ಲೊಬ್ಬನು.

ಈ ರೀತಿ ತೆಲುಗು ಭಾಷೆಗೆ ಹೇಗೋ ಹಾಗೆಯೇ ಕನ್ನಡಕ್ಕೂ, ಹಾಗೆಯೇ ತಮಿಳಿಗೂ, ಹಾಗೆಯೇ ಮರಾಠಿಗೂ, ಬಂಗಾಳಿಗೂ, ಹಿಂದೂಸ್ಥಾನಿಗೂ, ಇತರ ಭಾಷೆಗಳಿಗೂ ಸಹಸ್ರಾರು ಸಂಖ್ಯೆಯಲ್ಲಿ ಆ ಪಾಶ್ಚಾತ್ಯರು ದುಡಿದರು. ಹಾಗೆ ನಮ್ಮ ಭಾಷಾ ಸಾಹಿತ್ಯಕ್ಕೆ ಮತ್ತು ಸಂಸ್ಕೃತಿಗೆ ಜೀವಕಳೆಯಿತ್ತ ಪಾಶ್ಚಾತ್ಯ ವಿದ್ವಾಂಸರನ್ನು "ಮಿಷನರಿ"ಗಳು ಕೆಲವರು ಮಾತ್ರ ಎಂದು ಇನ್ನೂ ನಮ್ಮ ಹೇಳುತ್ತಿದ್ದೇನೆ, ಮತ್ತೊಮ್ಮೆ ವಿಮರ್ಶಕರನ್ನು ನೆಟ್ಟಗಾಗಿಸಲು ಹೀಗೆ ಕೆಲವು ವಿಷಯಗಳನ್ನು ಪುನಃ ಪುನಃ ಹೇಳುತ್ತಿದ್ದೇನೆ. ಅವರನ್ನು ಹಾಗೆ ನೆಟ್ಟಗಾಗಿಸದಿದ್ದರೆ ತಮ್ಮ ಅಜ್ಞಾನದ ತಜ್ಞತೆಯನ್ನು, ನಾಡೆಲ್ಲ ಬಿತ್ತಿ ಆ ರೀತಿಯಾಗಿ ತಮ್ಮ ಅವಿವೇಕವನ್ನು ತೋರ್ಪಡಿಸಿಕೊಂಡು ಹಿಗ್ಗುತ್ತಿರುತ್ತಾರೆ.

ಸ್ಥಿತಿ ಅಂತಿರುವಾಗ ನಮ್ಮ ಜಾತೀಯವಾದಿ ಸಾಹಿತಿಗಳು, ಜಾತೀಯವಾದಿ ಪ್ರಾಧ್ಯಾಪಕರು, ಜಾತೀಯವಾದಿ ಅವಿವೇಕಿಗಳೆಲ್ಲ ಸೇರಿ ಹಿಂದ್ವಾರು ವರ್ಷಗಳಿಗೆ ಹಿಂದೆ Fredrick Maxmueller ಇವನ ಕೃತಿಗಳನ್ನು ನೋಡಿ ಹೊಟ್ಟೆಬೇನೆಗೊಳಗಾದವರಂತೆ ಇಂದೂ ವರ್ತಿಸುತ್ತಿದ್ದು ಏಕೆ? ತಾವು ವಿಮರ್ಶೆ ನಡೆಸುವುದರಿಂದ ಸ್ವಂತ ಹಿಂದಿನ ಪುಸ್ತಕವನ್ನು ಕೆಲತಾಗಿ ಬರೆಯುವ ಜನ ಆ ಪುಸ್ತಕದಿಂದಲೇ ಮೊದಲು ಬಾರಿಗೆ ವಿಷಯಗಳನ್ನರಿತು ಕಡೆಗೆ ಅದು ಹಾಗೆ, ಇದು ಹೀಗೆ ಎಂದು ಯಾರಾರನ್ನೋ ಮಂಚಿಸಲಿಕ್ಕೆ ಮತ್ತು ತಮ್ಮ ಅಹಂಕಾರವನ್ನು ತೋರಿಸಲಿಕ್ಕೆ ಹೊರಟವ ಮಿಥ್ಯಾ ಪ್ರಚಾರಕರನ್ನು ಮಿಥ್ಯಾವಾದಿಗಳು ಯಾರಿಗೆ? ಅದರಲ್ಲೂ ಹಿಂದು ಬಗೆಯ ರಾಜಕೀಯ! ಸಾಹಿತಿಗಳು, ಸಾಹಿತ್ಯ ಸಂಸ್ಥೆಗಳು ಮತ್ತು ಸರಕಾರದಿಂದ "ಗ್ರಾಂಟಿನ ಗಂಟು"ಗಳು! ಅಂತರಂಗವಾಗಿ ಅಲ್ಲಿ ಹಿಂದು "ತಜ್ಞರ ತಂಡ"ವೊಂದು ಮೊಳೆತು ಇತರ ಸಾಹಿತಿಗಳನ್ನು ಹತ್ತಿಕ್ಕಿ ತಮ್ಮ ತಮ್ಮ ಕೃತಿಗಳ ವ್ಯಾಪಾರದಲ್ಲಿ ನಿರತರಾದಾಗ ಎಲ್ಲವೂ ನೆಟ್ಟಗಾದಂತೆಯೇ! ಲೋಕವು ನಿಜಕ್ಕೂ ಸುಂದರವಾಗಿದೆ.

ನಾನು History of Karnataka-(ಎರಡನೇ ಆವೃತ್ತಿ)

ಬರೆದಾಗ, ಇದೇ ಕೃತಿಯ ಮೊದಲ ಆವೃತ್ತಿಯನ್ನು ಪ್ರಕಟಿಸಿದಾಗ, Tipu Sultan X'Rayed ಎಂಬುದಾಗಿ ನಾಮಕರಣ ಮಾಡಿದಾಗ ಮೇಲೆ ಹೇಳಿದ ರೀತಿಯ "ತಜ್ಞರು" ಆರಾರು ಎಂದು ನೋಡುತ್ತಿರುವೆನಾದರೂ ಆ ನನ್ನ ಜ್ಞಾನವು ಸಾಕಷ್ಟು ಅಲ್ಪವೆಂದು ಹೇಳುತ್ತಿದ್ದೇನೆ.

ನಮ್ಮಲ್ಲಿ ಯಾರಾರು ಅತಿರಥರು, ಯಾರಾರು ಮಹಾರಥರು ಎಂದು ತಿಳಿಯಲು ನಾನು ಒಮ್ಮೊಮ್ಮೆ ಅಲ್ಲಲ್ಲಿ ಸಾಹಿತ್ಯ ಸಂಚಿಕೆಗಳನ್ನು ನೋಡುತ್ತಿರುತ್ತೇನೆ. "ಕನ್ನಡ ನುಡಿ" ಯೆಂಬೊಂದು "ನುಡಿ" ಇದೆ. ಅದರಲ್ಲಿ ಬಹುಶಃ ಹೆಚ್ಚಾಗಿ ಅಲ್ಲಿ ನಗೆ, ಇಲ್ಲಿ ಗಲಭೆ; ಅಲ್ಲಿ ಕೂಟ, ಇಲ್ಲಿ ಕಾಟ; ಅವರಿಗೆ ಸನ್ಮಾನ, ಇವರಿಗೆ ಬಹುಮಾನ; ಅವರಿಗೆ ಶಾಲು, ಇವರಿಗೆ ಹೋಲು; ಅವರಿಗೆ ಹೂಮಾಲೆ, ಇವರಿಗೆ ಸಂಕೋಲೆ; ಇತ್ಯಾದಿಯಾಗಿ ಹೇಳುವ ವಾರ್ತೆಗಳು! ಅಲ್ಲಿ ಹೇಳುವ ಅವರು ಇವರು ಎಲ್ಲರೂ ಸಾಹಿತಿಗಳು!

ಹೀಗಿರುವ ವಾತಾವರಣದಲ್ಲಿ ಯಾರಾರು, ಏನೇನು ಎಂದು ತಿಳಿಯುವುದೇ ಕಷ್ಟವಾಗಿದೆ. ಹಾಗೂ ನಮ್ಮಲ್ಲಿರುವ ಪತ್ರಿಕೆಗಳ ಸಂಖ್ಯೆಗಿಂತಲೂ ಸಾಹಿತಿಗಳ ಸಂಖ್ಯೆಯೇ ಹೆಚ್ಚೆಂದು ಹೇಳಬಹುದು. ಕೆಲವು ಸಾಹಿತಿಗಳ ಹಿಂಬಾಲಕರು ಎಂ. ಎಲ್. ಎ., ಗಳಾದರೆ ಕೆಲವರ ಹಿಂಬಾಲಕರು ಎಂ. ಎಲ್. ಸಿ., ಗಳು. ಒಟ್ಟಾಗಿ ರಾಜಕೀಯದ ಕೈವಾಡ ಎಲ್ಲಾ ಕ್ಷೇತ್ರಕ್ಕೂ ಹೊಕ್ಕು, ಎಲ್ಲದರ ಸೃಷ್ಟಿ, ಸ್ಥಿತಿ, ಲಯವೆಲ್ಲವೂ ರಾಜಕೀಯದಲ್ಲಿ ಲೀನವಾಗಿದೆ. ನಮ್ಮ ಪ್ರಾಚಾರ್ಯರ ಕೆಲವು [illegible] ಬುದ್ಧಿ ಹೇಳಿ ನಡೆಯುವ ಹಣದಿಂದ ಸೃಷ್ಟಿಸುವ ಸಾಹಿತ್ಯವು "ಹಸ್ತ ಭೂಷಣ" ವಲ್ಲವಾದರೂ ಗ್ರಂಥಭಂಡಾರಗಳ ಕಪಾಟುಗಳಿಗೆ ಭೂಷಣಪ್ರಾಯವಾಗುವುವು. ಈ ಬಗೆಯ ಉತ್ಪಾದನೆ ಮತ್ತು ವ್ಯವಹಾರಗಳು ಇಲ್ಲಿ ಮಾತ್ರವಲ್ಲ; ಎಲ್ಲೆಡೆಯೂ ಹೀಗೇನೇ ಎಂಬುದಾಗಿ ಬಲ್ಲವರ ಹೇಳಿಕೆಯಾಗಿದೆ!

ಇದರ ಜೊತೆಯಲ್ಲಿ ಸಾಹಿತಿಗಳೆಂಬ ವೇಷಧಾರಿ, ತಮ್ಮ ಜೀವನದ ನಿವಾಸವನ್ನು ತಮ್ಮ ಬಾಳಿನಿಂದ ಸಾರಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವ, ಆ ರೀತಿ ಸನ್ಮಾನಗಳನ್ನು ಪಡೆಯುವ, ಪ್ರಶಸ್ತಿ [illegible] ಕೆಲವೊ ಇದೆಯಂತೆ. ತಮ್ಮ ಹುದ್ದೆಗಳಲ್ಲಿ ತಮ್ಮ ಅಸಹಕತೆಯನ್ನು ಮರೆಸುವ ಇವರು ತಮ್ಮ ಆ ದೌರ್ಬಲ್ಯವನ್ನು ಮರೆಸಲು ಹೀಗೆ ಸಾಹಿತಿಗಳೆಂಬ ವೇಷವಂತೆ, ರಾಜಕೀಯ ಜನದ ಕಾಠಕವನ್ನು ನರಿಸುವ ಇಂಥ "ನಿಮಿತ್ತ ಸಾಹಿತಿಗಳು" ಮತ್ತು ವೇದಾಂತಿಗಳು ಆಡುವ ನಾಟಕ, ಬಗೆಯುವ ದ್ರೋಹ, ತೋರಿಸುವ ಅಹಂಕಾರ ಇತ್ಯಾದಿ ಅನೇಕ! ಇಂಥವರು ಬರೀ Mercenary ಸಾಹಿತಿಗಳೆಂದೆನ್ನಬಹುದು, ನಮ್ಮ Professional Politicians ಹೇಗೋ ಹಾಗೆ! ನಾಳೆ ಬೀದಿಪಾಲು ಮಾಡುವ ಕೇಸರಿಗಳು, ಕಪ್ಪೆಗಳು!

ಅದೇನಿದ್ದರೂ ಈ ಕ್ಷೇತ್ರದಲ್ಲಿ ಪರಿಸ್ಥಿತಿ ಯಾಕೆ ಇನ್ನೂ ಉ

ತ್ತುವುದಕ್ಕೆ ಸಾಧ್ಯವಿಲ್ಲವಂತೆ! ಹಾಗಿರುವಾಗ ನಿಸ್ಸಂಶಯವಾದ ಪರಿಸ್ಥಿತಿ ಉತ್ಪತ್ತಿಯಾಗುವುದರಿಂದ ನಿರೀಕ್ಷಿಸುವುದು ನಿಷ್ಪ್ರಯೋಜಕವಂತೆ! ಅಂತೆಯೇ ಆಗಲಿ!

ನಮ್ಮ ವಿಶ್ವವಿದ್ಯಾಲಯಗಳಲ್ಲಿ ಸಾಹಿತ್ಯ, ಇತಿಹಾಸ, ವಿಜ್ಞಾನಾದಿ ಕ್ಷೇತ್ರಗಳಲ್ಲಿ ಅಣಬೆಗಳಂತೆ ಮೊಳೆಯುತ್ತಿರುವ instant experts ಇವರಿಂದಾಗಿ ಹಲವರಿಗೆ ಪಾಡಿಗೂ ಹಲಕೆಲವರಿಗೆ ತೊಂದರೆ ಆಗಿಯೇ ಆಗಿದೆ. ಅಂಥವರಿಂದ ರಕ್ಷಿಸಿಕೊಳ್ಳುವುದಕ್ಕಾಗಿಯೇ ನಮ್ಮ ಹಲವು ಹಿರಿಯ ಹಾಗೂ ನಿಷ್ಠೆಯ ಬರಹ ಸಾಹಿತಿಗಳು ಮೌನವಹಿಸುತ್ತಿರುವುದು ಈಗ ನನಗೆ ಗೊತ್ತಾಗಿದೆ. ನಮ್ಮ "ಸಮಿತಿ ಸಾಹಿತಿಗಳು" ತಮ್ಮ ಅಂಥ ತಮಗೆ ಅನುಕೂಲವಾದ ಅಲ್ಪ ಸಾಹಿತ್ಯವನ್ನು ಪಠ್ಯಪುಸ್ತಕಗಳಿಗಾಗಿ ಅಂಥಾ ಸರಕಾರೀ ಪ್ರಶಸ್ತಿಗಳಿಗಾಗಿ ಆರಿಸಿಕೊಳ್ಳುತ್ತಾರೆ; ಅವರ ಗುಂಪು ರಾಜಕೀಯಕ್ಕೆ ಬಲಿಯಾಗದವರ ಕೃತಿಗಳನ್ನು ತಿರಸ್ಕರಿಸುವುದು ಇತ್ಯಾದಿ ಅವ್ಯವಹಾರವನ್ನೆಲ್ಲ ಕಾಲದಿಂದ ಕಾಲಕ್ಕೆ ಮಾಡುತ್ತಾರೆ. ಇಂಥವರೇ ಸರಕಾರದ ಜನಕ್ಕೆ ತಜ್ಞ ಸಲಹೆಗಾರರು, ಅಂಥಾ expert advisers!

ಇದನ್ನೆಲ್ಲ ಹಲವಾರು ಕಂಡು ನೋಡಿದ, ಅನುಭವಿಸುತ್ತಿರುವ ನಾನು ಇತರರಂತೆ ಕಣ್ಣುಮುಚ್ಚಿಕೊಂಡು ಇರಲಾರೆನು, ಜ್ಞಾನವ್ಯವಹಾರ ವಿವಿಧ ಕ್ಷೇತ್ರದಲ್ಲಿ ಎಂತಹದೇ ಇಂದು ಸಾರ್ವಜನಿಕವಾಗಿ ಎಲ್ಲ ಜನರಿಗೂ ತಿಳಿಸುವುದೇ ವಿದ್ಯೆ! ಕೆಲವರು ಸಾಹಿತಿಗಳು, ವೇದಾಂತಿಗಳು ಯಾವುದನ್ನು ತಾವೇ ಸ್ವಗಿ ವಿದ್ಯಾಧೀಶರಾಗುವರೆಂಬುದನ್ನು ನೋಡಿ ತಿಳಿಯುವುದೇ ಪ್ರಯೋಜನವಿದ್ಯೆ! ನಮ್ಮ "ತಜ್ಞರ ಬಳಗ"ದ ನಿರ್ಧಾರದಿಂದ ನಾವು ಅದನ್ನೆಲ್ಲ ಕಲಿಯಬಹುದು! ಅದು, ಅದು ಹಾಗಲ್ಲ, ಎಂದನ್ನು ವಿರೋ? ಇರಬಹುದು; ಆದರೂ ಪುನಃ ಹೇಳುತ್ತೇನೆ: ಕಲಿಕೆಗಂತೂ ಉಳಿಯುವುದು ಸತ್ಯ!

ವಿದೇಶಗಳಲ್ಲಿರುವ ನಿಸ್ಸಂಶಯ ಬರಹಗಾರರು ಅದೇನು ಬರೆಯುತ್ತಿರುವರೆಂಬುದೇ ತಿಳಿಯದು; ಅದೇಕೆ ಹಾಡುತ್ತಿರುವರೆನ್ನೇ ತಿಳಿಯದು; ಅದೇಕೆ ನಾನು ಇಲ್ಲಿಗೆ ಬಂದು ಕಿಂಡಿಕಳ್ಳುತ್ತಿರುವೆನೋ ತಿಳಿಯದು! ಏಕೆಂದರೆ ನನಗೂ ಸಹ ಪತ್ರಿಕೆ ಸಾಹಿತಿಗಳೂ ಅವಿದ್ವಾಂಸರ ಮಾರ್ಗ-ಪ್ರಾಕಾರರೂ ಸಿಕ್ಕಿದ್ದು ಗೊತ್ತಿಲ್ಲ ಅದೇಕೋ ಕಾವ್ಯ-ಕಥೆಗಳು ಅಂಥಾ ಶಿಲ್ಪಿ-ಕಲಾವಿದರೂ ಒತ್ತಡದಿಂದಾಗಿದೆಯೆಂದೆನ್ನುವುದೇ ನನ್ನ ಸಿದ್ಧಾಂತ ಬರೆದ ಪತ್ರಿಕೆಗಳಿಂದೆನ್ನುತ್ತೇನೆ!

ನನ್ನ ಹೇಳಿಕೆಯಲ್ಲಿ ಒಂದೊಂದಕ್ಕೆ ಪ್ರತಿಯು

ಮಾಡುವುದಿದ್ದರೆ ಅದು ನನ್ನ ತಿಳುವಳಿಕೆ ತಪ್ಪು! ಬರೆಯುವುದು ನಾನು ಎಂಬುದಾಗಿ ನನ್ನ ಮನಸ್ಸು ಹೇಳಿದರೂ ನನ್ನ ತಿಳುವಳಿಕೆ ಅದೇಕೋ ಒಪ್ಪಿಕೊಳ್ಳದು! ಆದುದರಿಂದ ಈ ತಿಳುವಳಿಕೆ ತಾಳಿಯು ಮೂಡಿಬರುವ ವರೆಗೂ ಇದನ್ನೆಲ್ಲ ಬರೆದೆನು. ಹಿಂದೆಯೇ ಹಲವು ಬಾರಿ ಉದ್ಧರಿಸಿದಂತೆ ನಾನು ಏನೇನೋ ವೇಷಧಾರಿಗಳಾಗಿ ಕತ್ತಲಲ್ಲಿ ತಿಳುವಳಿಕೆಯನ್ನು ಹಿಡಿದು ಕಾಣ್ಕೆ ಮಾಡಿದರೂ ಅವೆಲ್ಲ ಬರೀ ಕನಸು, ತೆರೆ ಬೀಳುತ್ತೆ, ಎಂದು ಬಂದಲ್ಲ ಬಂದು ಕಾಲದಲ್ಲಿ ವ್ಯರ್ಥವಾಗದೆ ಇರದು! ಏಕೆಂದರೆ ಕಡೆಗಂತು ಉಳಿಯುವುದು ಸತ್ಯ!

ಏನೇ ಇರಲಿ; ಹಲಕೆಲವು ಅಭಿಪ್ರಾಯಗಳು ಎಲ್ಲಾ ಕಾಲದಲ್ಲೂ ಎಲ್ಲೆಲ್ಲೂ ಇರುವಂತೆ ಯಾವಾಗಲೂ ಇರುವವಷ್ಟೆ! ಅಂಥವರು ತಲೆಮರೆಸಿಕೊಂಡು ನನ್ನ ಸಾಹಿತ್ಯದ ಮತ್ತು ಇತಿಹಾಸದ ಬರಹಗಳ ಬಗ್ಗೆ ಅಪಪ್ರಚಾರ ಮಾಡುತ್ತಾ, ನನಗೆ ಏನನ್ನು ಕೊಟ್ಟರೂ ಅದಕ್ಕೆಲ್ಲ ನಾನು ಇಲ್ಲಿ ಬಡ್ಡಿ ಸೇರಿಸಿ ಅವರಿಗೇನೇ ಅದನ್ನೆಲ್ಲ ಮಾರಾಟ ಕೊಟ್ಟಿದ್ದೇನೆ. ಏಕೆಂದರೆ ನಾನು ಯಾರೊಬ್ಬನ ಸಾಲವನ್ನೂ ಇಟ್ಟುಕೊಂಡವನಲ್ಲ!

ಹಾಗೆಂದ ಮಾತ್ರಕ್ಕೆ ನನ್ನೀ ಕೃತಿಯನ್ನು ಇತರ ಕೃತಿಗಳನ್ನು ಯಾರೂ ಮನ್ನಣೆಯಿಂದ ಕಾಣಲಿಲ್ಲವೆಂದಲ್ಲ, ಬರೀ ಕೆಲವರು ಮಾತ್ರ ಇತರರ ಪ್ರಯತ್ನವನ್ನು ಕಡೆಗಣಿಸುತ್ತಾರಲ್ಲದೆ ಎಲ್ಲರೂ ಅಂತಹವರಿಂದಲ್ಲ! ಹಲವಾರು ಹಿರಿಯ ಹಾಗೂ ಕಿರಿಯ ಅಧ್ಯಯನಕಾರರು ನನ್ನೀ ಕೃತಿಗಳ ಬಗ್ಗೆ ತುಂಬಾ ಪ್ರಶಂಸೆ ಮಾಡಿದ್ದಾರೆ. ಪ್ರತಿಷ್ಠಿತ ಸಂಸ್ಥೆಯವರು ಮೊದಲಿಗೂ ನನ್ನ ಈ ಕೃತಿಯ ಮೊದಲ ಆವೃತ್ತಿಯನ್ನು ಸ್ವೀಕರಿಸಿದ್ದಾರೆ, ವಿಶ್ವಕೋಶದ ವಿದ್ಯಾಪೀಠಗಳಲ್ಲಿ ಹಲವರು ನನ್ನ ಸಾಹಸವನ್ನು ಶ್ಲಾಘಿಸಿ ಬರೆದಿದ್ದಾರೆ; ಒಬ್ಬ ವಿದ್ವಾಂಸರು ಈ ರೀತಿಯಾಗಿಯೂ ಹೇಳಿದರು:-

"ಸಾಹಿತ್ಯ ವಿದ್ವಾಂಸರ ಕನ್ನಡ ಸೇವೆ— ಇದು ಅತ್ಯಂತ ವಿಚಾರ ಪರಿಪೂರ್ಣ ಗ್ರಂಥ. ಪ್ರತಿ ಪುಟ ಈ ದೇಶಕ್ಕೆ ಬಂದುದರಿಂದ ಸರ್ವ ಬರಹ- ವಿದ್ಯೆ — ವಿಚಾರ — ಅದ್ವೈತ ಇತ್ಯಾದಿಗಳಲ್ಲಿ ಎಂತಹ ಹೊಸ ಬದಲಾವಣೆಗಳಾದುವು ಎಂಬುದನ್ನು ವಿವರಿಸಲಾದರ ಜತೆಗೆ ಅವರ ಸಾಹಸವನ್ನು ಭಾವಚಿತ್ರಗಳ ಸಹಿತ ವರ್ಣಿಸಿದ ಅತ್ಯಂತ ಶ್ರೇಷ್ಠ ಸಂಶೋಧನಾ ಗ್ರಂಥ! ಶ್ರೀಮತಿ ಕಾವ್ಯಕ್ಕೆ ಉದಾರ ತರಂಗವ ಪುಸ್ತಕ ವಿವರ! ಇಂಥ ಗ್ರಂಥಗಳು ಹೆಚ್ಚಿದಷ್ಟು ಕನ್ನಡ ಸಂಶೋಧನೆಗೆ ಕೊಡುಗೆಯಾಗುತ್ತದೆ ———."

ಹೀಗೆ ಇನ್ನೆಷ್ಟೋ ಪ್ರಸಂಗ ವಾಕ್ಯಗಳನ್ನು ಉದಾಹರಿಸಬಹುದು! ಹೀಗೂ ಈ ನನ್ನ ಬರಹವನ್ನು ಕೊನೆಗೊಳಿಸುವ ಮೊದಲು ಈ ಸಂಬಂಧ ವಿಷಯವನ್ನು ಹೇಳಬೇಕೆಂದೆನ್ನಿಸುತ್ತದೆ. ಹಿರಿಯರೂ ಮಾನ್ಯರೂ ಜ್ಞಾನಿಗಳೂ ಪ್ರಸಿದ್ಧ ವಿಜ್ಞಾನಿಗಳೂ ನಮ್ಮ mercenary ಹಾಗೂ ಜಾತೀಯತಾವಾದೀ ಸಾಹಿತಿಗಳ ಮತ್ಸರಕ್ಕೆ ತುತ್ತಾಗಿದ್ದವರಲ್ಲಿ ಒಬ್ಬರೂ ಆದ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ತಮ್ಮ ೯೦ರ ಹರಯದಲ್ಲಿ ದಿವಂಗತರಾಗುವ ಕೆಲವು ತಿಂಗಳಿಗೆ ಹಿಂದೆ ತಮ್ಮ ಸ್ವಹಸ್ತಾಕ್ಷರದಲ್ಲಿಯೇ ಬರೆದಿದ್ದ ಪತ್ರವು ನನಗೆ ವೃದ್ಧತೆಯಲ್ಲಿಯೂ ಅವರ ಚೇತನ ಆತ್ಮೀಯ ಚಿಂತನವೇ ಆಗಿತ್ತು. ಅವರು ಹೀಗೆ ಬರೆದಿದ್ದರು: —

“ಪ್ರಿಯ ಮಿತ್ರರೆ, ----ನಾವು ಒಬ್ಬರಿಗೊಬ್ಬರು ಕಂಡು ಬಹಳ ಕಾಲ ಕಳೆದಿದೆಯೆಂದು ನನಗನ್ನಿಸಿದೆ. ದೂರದಲ್ಲಿ ಇದ್ದೀರಿಯೆನ್ನುವುದು ಮನಸ್ಸಿಗೆ ಕೊರೆಯಾದರೂ ಬಾಳಿನಲ್ಲಿ ತೃಪ್ತಿ, ಸಮಾಧಾನ ಇರುವುದರಿಂದ ಮನಸ್ಸು ಎಲ್ಲಿಯೇ ಇರಲಿ, ಸುಖವಾಗಿ ಬಾಳಲಿ ಎನ್ನುತ್ತದೆ ---.

“ಸರಿಯಾದ ಕಾಲದಲ್ಲಿ ವಿಶ್ರಾಂತಿ ಪಡೆದು ತಾಯಿನಾಡಿಗೆ ಕ್ಷೇಮವಾಗಿ ಹಿಂದಿರುಗಿರಿ. ದೇವರು ಇದನ್ನು ಅನುಗ್ರಹಿಸಲಿ ----.”

ಇದು ಹಿರಿಯ ಬರಹಗಾರರು ನನ್ನೊಡನೆ ದೂರದಿಂದಲೇ ಆಡಿದ ಕಡೇ ಮಾತು! ಹಿರಿಯರ ಇಂಥ ನುಡಿಗಳು ನಿಜಕ್ಕೂ ಬಳಲಿದ ಮನವನ್ನು ತಣಿಸುವುವು! ದುರಾಗ್ರಹೀ ಬರಹಗಾರರ ದೃಷ್ಟಿಯಿಂದ ತಪ್ಪಿ ಬದುಕಿದ ನನ್ನ ಮನ “ಎಲ್ಲಿಯೇ ಇರಲಿ, ಸುಖವಾಗಿ ಬಾಳಲಿ, ಎನ್ನುತ್ತದೆ.”

ಹೌದು, ಹಾಗನ್ನುತ್ತದೆ. ಆ ಇನಿದನಿಯು ಪ್ರತಿಧ್ವನಿಗೊಳ್ಳುತ್ತಿದೆ. ಮನಸ್ಸಿಗೆ ಒಂದಿಷ್ಟು ಸಂತೃಪ್ತಿಯು ಸಿಗುತ್ತದೆ. ಹಾಗಾಗಲೇ ಇತ್ತಿದೆ!!!

ಓಂ — ಶಾಂ — ತಿ!

ಇತಿ ನಮಸ್ಕಾರಗಳು,

ಡಾ. ಮಾ. ಮಿತ್ರ್ಯಾ,

ತಾ॥ ೧-೧೧-೧೯೮೬
ವಿನ್ನಿಪೆಗ್, ಕೆನಡಾ.

ಡಾ|| ಪ್ರ. ಮಾ. ಮುತ್ತಣ್ಣನವರ ಸಂಗ್ರಹ. 47(2) 1203 ಸಂ. ಸಂ. 349
ಒಟ್ಟು ದಾ|| = 8

ಕ್ರ. ಸಂ.	ವಿಷಯ	ಸಂಕ್ಷಿಪ್ತ ವಿವರಣೆ	ವರ್ಷ	ದಾಖಲೆಗಳ ಸಂಖ್ಯೆ
1.	Gen K.M. Carwappa (Retd) Kodagu Mercara	Field Marshal, Gen K.M. Carwappa (Retd) Commander-in-chief, Indian Army & High commissioner of India in Australia, and himself a writer, wrote about I.M. Muthanna & his character and also his works and writings Reg. paper clipping (E)	—	2.
2.	The Hindu (paper) 10-6-1980	A.S. Kedilaya (The Hindu) expressed his views towards I.M. Muthanna and his writings called Muthannas Karanagalu in Kannada. (E)	10-6-1980	1.
3.	—	THE AUTHOR Muthannas character and his beginning career, Muthanns works and his work i.e., History of Karnataka Reg. along with his photo clipping. (E)	—	1.
4.	—	THIS AUTHOR BY ON AMERICAN This paper clipping contains Muthanna's life career in America and Muthannas life experiences in Canada (America) Reg and also it expresses Muthanna As India ~~Am~~ Canadian Community Reg. (E)	—	2.

→ 2.

ಡಾ॥ ಐ. ಮಾ. ಮುತ್ತಣ್ಣನವರ ಸಂಗ್ರಹ.

1904 ಕ್ರಂ. ಸಂ. 349.

ಕ್ರ. ಸಂ.	ಅವರಿಂದ.	ಸಂಕ್ಷಿಪ್ತ ವಿವರಣೆ	ವರ್ಷ	ದಾಖಲೆಗಳ ಸಂಖ್ಯೆ
5.	Wesley Lakefield. The Bishop - General The Ethical movement in America. —	"AN ALL TIME RECORD." The Bishop-General Interduces (E) I. M. Muthanna Through This letter and also He gaves breef note about Muthanna's Books Reg.	—	1.
6.	Prof. (Swami) Agehanada Bharathi Dept. of Sociology & Anthropology - Syracuse University. N. Y. U. S. A. —	Agenanda Bharathi Says (E) few words about I. M. Muttanna's Character and his writings - Reg.	-	2.
7.	"ಶಕ್ತಿ" ಪತ್ರಿಕೆ ಮಡಿಕೇರಿ (ಕೊಡಗು) —	ಡಾ॥ ಐ. ಮಾ. ಮುತ್ತಣ್ಣನವರು ಸಂಗ್ರಹಿಸಿದ (ಕ) 18ನೇ ಶತಮಾನದ ಪಾಶ್ಚಾತ್ಯ ಕವಿಗಳ ಬಗ್ಗೆ "ಶಕ್ತಿ" ಪತ್ರಿಕೆಯು ಪ್ರಕಟಿಸಿದ ಇವರ ಆಂಗ್ಲ ಸಾಹಿತ್ಯದಲ್ಲಿ ಕಂಪನಿ ಸಂಬಂಧವಿದ್ದಂತೆ ಕೀಟ್ಸ್ ಶೆಲ್ಲಿ, ಬೈರನ್, ಟೆನಿಸನ್, ವರ್ಡ್ಸ್‌ವರ್ತ್ ಸ್ಕಾಟ್ ಮುಂತಾದ ಕವಿಗಳ ಜೀವನ ಚರಿತ್ರೆ, ವಿಮರ್ಶೆ ಮತ್ತು ಕವನಗಳು ಮುಂತಾದವು [illegible] [illegible]	19-8-1972	— 1.
8.	ಕನ್ನಡ ನಾಡು ಸಂಪಾ. ಡಾ. [illegible] [illegible]	— "ಕೊಡಗಿನ ಮುತ್ತಣ್ಣ ಒಂದು ನೆನಪು" ಎಂಬ (ಕ) ಶೀರ್ಷಿಕೆಯಲ್ಲಿ ಐ. ಮಾ. ಮುತ್ತಣ್ಣನವರನ್ನು ಕುರಿತ 526 ರಿಂದ 45 ನೇ ಪುಟದವರೆಗೆ 1980 ರ ಜನವರಿಯಲ್ಲಿ ಪ್ರಕಟಗೊಂಡ ಪತ್ರಿಕೆಯಲ್ಲಿ ಮುತ್ತಣ್ಣನವರ ಸಾಹಿತ್ಯ, [illegible] [illegible], [illegible] [illegible] [illegible] ಬಗ್ಗೆ ವಿವರಗಳಿವೆ	—	1.